CCE

ಸ ಮಾ ಜ ವಿ ಜ್ಞಾ ನ

# ಸ್ಪಂದನ

## ನಿರಂತರ ಮತ್ತು ವ್ಯಾಪಕ ಮೌಲ್ಯಮಾಪನ

### ಪ್ರೌಢಶಾಲಾ ಸಮಾಜ ವಿಜ್ಞಾನ ಶಿಕ್ಷಕರ ಮಾರ್ಗದರ್ಶಿ

ಶ್ರೀ ಆರ್ ಜಿ ಆಹೇರಿ.
ಕಲಾ ಶಿಕ್ಷಕರು

ಶ್ರೀ ಎಸ್.ಜಿ.ಕೋಟಿ.
ವಿಷಯ ಪರಿವೀಕ್ಷಕರು.



# ಹಾರೈಕೆ

ವಿದ್ಯಾರ್ಥಿಗಳಲ್ಲಿನ ಕಲಿಕೆಯ ಗುಣಮಟ್ಟವನ್ನು ಉತ್ತಮಪಡಿಸಲು ರಾಷ್ಟ್ರಾದ್ಯಂತ ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು–2005 ನ್ನು ಜಾರಿಯಲ್ಲಿ ತರಲಾಗಿದೆ. ಶಾಲೆಯಲ್ಲಿನ ವಿದ್ಯಾರ್ಥಿಗಳ ಕಲಿಕೆಯನ್ನು ಬಲಗೊಳಿಸುವ ದಿಶೆಯಲ್ಲಿ, ನಿರಂತರ ಮತ್ತು ವ್ಯಾಪಕ ಮೌಲ್ಯಮಾಪನ ವಿಧಾನವನ್ನು ಬಳಸಲಾಗುತ್ತಿರುವುದು ವಿಶೇಷ. ವಿದ್ಯಾರ್ಥಿಗಳ ಕಲಿಕಾ ಮಟ್ಟವನ್ನು ವಿವಿಧ ಸಾಧನ ತಂತ್ರಗಳನ್ನು ಸಮರ್ಥವಾಗಿ ಬಳಸಿ ತಿಳಿಯಬೇಕಾಗಿದೆ. ವಿದ್ಯಾರ್ಥಿಗೆ ತನ್ನ ಕಲಿಕೆಯ ಬಗ್ಗೆ ಆತ್ಮ ವಿಶ್ವಾಸವನ್ನು ಮೂಡಿಸಿ, ಯಾವುದೇ ಭಯ ಆತಂಕಗಳಿಲ್ಲದ ಮುಕ್ತ ವಾತಾವರಣದಲ್ಲಿ ಕಲಿಕೆಯನ್ನು ಅವರ ಅನುಭವಕ್ಕೆ ತಂದು, ಅಪೇಕ್ಷಿತ ಬೆಳವಣಿಗೆಯ ಕಡೆಗೆ ಮಾರ್ಗದರ್ಶನ ಮಾಡಬೇಕಿದೆ.

ನಿರಂತರ ಮತ್ತು ವ್ಯಾಪಕ ಮೌಲ್ಯಮಾಪನ ಕುರಿತು ಬಹಳಷ್ಟು ಶಿಕ್ಷಕರಲ್ಲಿ ಗೊಂದಲಗಳು ಮತ್ತು ಅನುಮಾನಗಳಿರುವುದನ್ನು ನಾನು, ಶಾಲಾ ಸಂದರ್ಶನ ಸಮಯದಲ್ಲಿ ಕಂಡುಕೊಂಡಿದ್ದೇನೆ. ಶಾಲೆಗಳಲ್ಲಿ ವಿದ್ಯಾರ್ಥಿಗಳ ಕಲಿಕೆಯ ಕುರಿತು ಕೇವಲ ದಾಖಲೆಗಳನ್ನು ಇಟ್ಟರೆ ಸಾಲದು, ಅವು ಕಲಿಕೆಯನ್ನು ದೃಢೀಕರಿಸುವ ಸಾಧನಗಳಾಗಬೇಕು. ಮೌಲ್ಯಮಾಪನವು ಕೇವಲ ಪಾಸು, ಫೇಲು ಎಂಬ ಫಲಿತಾಂಶವನ್ನು ಘೋಷಿಸಲಿಕ್ಕಲ್ಲ ಎಂಬುದನ್ನು ನಾವು ಅರಿಯಬೇಕಿದೆ. ಇದನ್ನು ಒಂದು ಬೋಧನಾ ವಿಧಾನವನ್ನಾಗಿ ಬಳಸಿಕೊಂಡು ಕಲಿಕಾ ಕೊರತೆ ಇರುವ ಮಕ್ಕಳಿಗೆ, ಹಿಮ್ಮಾಹಿತಿ ನೀಡಿ ಅಪೇಕ್ಷಿತ ಬದಲಾವಣೆಗೆ ಸಹಾಯಕವಾಗುವ ಒಂದು ವಿಧಾನ ಎಂಬುದನ್ನು ನಮ್ಮ ಶಿಕ್ಷಕರು ಮನಗಾಣುವಂತಾಗಬೇಕು.

ಶೈಕ್ಷಣಿಕ ನಾಯಕತ್ವ ವಹಿಸಿಕೊಂಡವರು ಶಾಲಾ ವ್ಯವಸ್ಥೆಯಲ್ಲಿ ಬದಲಾವಣೆಗಳನ್ನು ಅಳವಡಿಸಿಕೊಳ್ಳಬೇಕಾದರೆ, ಮನೋಧೋರಣೆಗಳನ್ನು ಬದಲಾಯಿಸಿಕೊಳ್ಳುವುದು ಅಷ್ಟೇ ಮುಖ್ಯ. ಒಂದು ಕಾರ್ಯಕ್ರಮವನ್ನು ಮೊದಲಿಗೆ ಅನುಷ್ಠಾನಕ್ಕೆ ತರುವಾಗ ನಾವು ಆ ಕಾರ್ಯಕ್ರಮದ ಬಗ್ಗೆ ಹೊಂದಿರುವ ಧೋರಣೆಗಳು, ಅದರ ಅವಶ್ಯಕತೆಯ ಬಗ್ಗೆ ನಮ್ಮ ನಿಲುವುಗಳು, ಕಾರ್ಯಕ್ರಮದ ಅನುಷ್ಠಾನದಲ್ಲಿ ನಮ್ಮನ್ನು ನಾವು ತೊಡಗಿಸಿಕೊಳ್ಳುವ ರೀತಿ, ಅದರ ಯಶಸ್ಸನ್ನು ನಿರ್ಧರಿಸುತ್ತದೆ. ಬದಲಾವಣೆಗಳನ್ನು ಜಾರಿಯಲ್ಲಿ ತರುವಾಗ ಅವುಗಳ ಅವಶ್ಯಕತೆ ಕುರಿತಂತೆ ನಾವು ಸ್ಪಷ್ಟವಾದ ವಿಚಾರಗಳನ್ನು ಹೊಂದಿರಬೇಕಾಗುತ್ತದೆ. ಶಾಲೆಗಳಲ್ಲಿ ನಿರಂತರ ಮತ್ತು ವ್ಯಾಪಕ ಮೌಲ್ಯಮಾಪನ ಅಳವಡಿಕೆ ಇಂದು ಹೊಸ ಪ್ರಯತ್ನವಾಗಿರುವುದರಿಂದ ಈ ಪದ್ಧತಿಯನ್ನು ಸರಿಯಾಗಿ ಅರ್ಥೈಯಿಸಿಕೊಂಡಲ್ಲಿ ಜಾರಿಯಲ್ಲಿ ತರುವುದು ಸುಲಭ ಸಾಧ್ಯ ಎಂದು ಭಾವಿಸಲಾಗಿದೆ. ಈ ಒಂದು ಪ್ರಯತ್ನದಲ್ಲಿ 10 ನೇ ತರಗತಿಗೆ ನಿರಂತರ ಮತ್ತು ವ್ಯಾಪಕ ಮೌಲ್ಯಮಾಪನ ಅನುಷ್ಠಾನ ಕುರಿತು ಒಬ್ಬ ಶಿಕ್ಷಕ ಏನೇನು ತಿಳಿದುಕೊಂಡಿರಬೇಕು, ಹೇಗೆ ಅನುಷ್ಠಾನಗೊಳಿಸಬೇಕು ಮತ್ತು ದಾಖಲೀಕರಣ ಮಾಡಬೇಕು? ಎಂಬುದನ್ನು ಶ್ರೀ ಎಸ್.ಜಿ.ಕೋಟಿ ವಿಷಯ ಪರಿವೀಕ್ಷಕರು ಹಾಗೂ ಶ್ರೀ ಆರ್.ಜಿ. ಆಹೇರಿ ಶಿಕ್ಷಕರು, ಉತ್ತಮವಾಗಿ ನಿರೂಪಿಸಿದ್ದಾರೆ. 'ಸ್ಪಂದನ' ಸಾಹಿತ್ಯವು ಶಿಕ್ಷಕರ ಹಲವು ಅನುಮಾನಗಳಿಗೆ ಸ್ಪಂದನೆಯಾಗುವಂತಾಗಲಿ. ಈ ಸಾಹಿತ್ಯದಲ್ಲಿರುವ ವಿಷಯಗಳೆಲ್ಲವೂ ಅಂತಿಮವಲ್ಲ, ಇದೊಂದು ಪರಿಚಯಾತ್ಮಕ ಪ್ರಯತ್ನವೆಂದು ಶಿಕ್ಷಕರು ಭಾವಿಸಬೇಕು. ಇಲಾಖೆ ಹೊರಡಿಸುವ ಅನೇಕ ಆದೇಶಗಳು ಹಾಗೂ ಸುತ್ತೋಲೆಗಳಂತೆ ಕ್ರಮವಹಿಸಬೇಕು. ನಿರಂತರ ಮತ್ತು ವ್ಯಾಪಕ ಮೌಲ್ಯಮಾಪನವನ್ನು ಸಮರ್ಥವಾಗಿ ಜಾರಿಗೊಳಿಸಲು ಈ ಸ್ಪಂದನ ಸಾಹಿತ್ಯವು ನಿಮಗೆ ಸಹಾಯಕವಾಗಲಿ ಎಂದು ಹಾರೈಸುತ್ತೇನೆ.

ಶಿವನಗೌಡ ಬ. ಪಾಟೀಲ
ಉಪನಿರ್ದೇಶಕರು(ಆಡಳಿತ)
ಸಾರ್ವಜನಿಕ ಶಿಕ್ಷಣ ಇಲಾಖೆ, ಹಾವೇರಿ

# ಆಶಯ

ಶಿಕ್ಷಕರ ಬೋಧನಾ ಕ್ರಮವು ನಿಂತ ನೀರಾಗಿರದೇ ಪರಿವರ್ತನಾಶೀಲವಾಗಿದೆ. ಎನ್.ಸಿ.ಎಫ್.–2005 ಹಾಗೂ ಆರ್.ಟಿ.ಇ–2009 ಜಾರಿಯಾದ ಮೇಲೆ ಶಿಕ್ಷಣದ ಪರಿಕಲ್ಪನೆಗಳು ಬದಲಾಗಿವೆ. ಕೇವಲ ವಿದ್ಯಾರ್ಥಿಗಳ ನೆನಪಿನಶಕ್ತಿಯನ್ನು ಪರೀಕ್ಷಿಸುವಂತಹ, ಪಾಠದ ಹಿಂದಿನ ಪ್ರಶ್ನೆಗಳಿಗೆ ಉತ್ತರಿಸುವಂತಹ ಕೌಶಲ್ಯಗಳಿಗೆ ಪ್ರಾಮುಖ್ಯತೆ ನೀಡಿದರೆ ಸಾಲದು, ವಿದ್ಯಾರ್ಥಿಗಳು ತರಗತಿಯಲ್ಲಿ ಪಡೆದಂತಹ ಜ್ಞಾನವನ್ನು ತಮ್ಮ ದೈನಂದಿನ ಬದುಕಿನಲ್ಲಿ, ಯಾವ ರೀತಿ ಹೇಗೆ ಬಳಕೆಮಾಡಿಕೊಳ್ಳಬೇಕು ಎಂಬ ಅನುಭವಗಳನ್ನು ಶಿಕ್ಷಕರು ತಮ್ಮ ಬೋಧನ ಅವಧಿಯಲ್ಲಿ ಪರಿಚಯಿಸಲು ಮುಂದಾಗಬೇಕಾಗಿದೆ.

ಎನ್.ಸಿ.ಎಫ್.–2005ರ ಆಶಯಗಳನ್ನು ಸಿ.ಸಿ.ಇ ನಲ್ಲಿ ಅಳವಡಿಸಲಗಿದೆ. ಎನ್.ಸಿ.ಎಫ್.ನ ಮಾರ್ಗದರ್ಶಿ ತತ್ವಗಳನ್ನು ಹೊಸಪಠ್ಯಪುಸ್ತಕಗಳಲ್ಲಿ ಅಳವಡಿಸಿ ಜಾರಿಯಲ್ಲಿ ತರಲಾಗುತ್ತಿದೆ. ಶಿಕ್ಷಕ ಬಂಧುಗಳು, ಎನ್.ಸಿ.ಎಫ್.–2005 ರಲ್ಲಿ ಏನಿದೆ ? ಇದರ ಆಶಯಗಳೇನು ? ಎಂಬುದನ್ನು ಅರಿತಲ್ಲಿ ಸಿಸಿಇ ಅಳವಡಿಕೆ ಸುಲಭ ಸಾಧ್ಯವಾಗುವುದಲ್ಲಿ ಸಂದೇಹವೇ ಇಲ್ಲ.

ವಿಭಿನ್ನ ಹಿನ್ನಲೆಗಳಿಂದ ಬಂದಂತಹ ಮಕ್ಕಳಿಗೆ ಪಾಠಬೋಧಿಸುವದು ಹೇಗೆ ? ಕಲಿಕೆಯಲ್ಲಿ ಮುಂದುವರೆದ, ಸಾಧಾರಣ ಹಾಗೂ ಹಿಂದುಳಿದ ಮಕ್ಕಳನ್ನು ಹೇಗೆ ಮೌಲ್ಯಮಾಪನಕ್ಕೆ ಒಳಪಡಿಸಬೇಕು ಎಂಬ ಪ್ರಶ್ನೆಗಳು ನಮ್ಮ ಮುಂದಿವೆ. ಪಾಠ ಬೋಧನೆಗೆ ಮುನ್ನ ಶಿಕ್ಷಕರಿಗೆ ಪೂರ್ವತಯಾರಿ ಅತೀ ಅವಶ್ಯ. ಶಿಕ್ಷಕರು ಪಾಠಬೋಧನೆಗೆ ಮುನ್ನ ಮಕ್ಕಳು ಏನನ್ನು ಕಲಿಯಬೇಕು, ಏನನ್ನು ಕಲಿತಿದ್ದಾರೆ, ಕಲಿಯದೇ ಇರುವ ಮಕ್ಕಳಿಗೆ ಪೂರಕ ತಂತ್ರಗಳು ಯಾವುವು, ಇವುಗಳನ್ನು ಯಾವ ರೀತಿ ಮೌಲ್ಯಮಾಪನ ಮಾಡಬೇಕು, ನಿರ್ವಹಿಸಬೇಕಾದ ದಾಖಲೆಗಳೇನು, ಮೌಲ್ಯಮಾಪನದ ಸಾಧನ,ತಂತ್ರಗಳು,ಚಟುವಟಿಕಗಳೇನು, ಇವುಗಳನ್ನು ಬಳಸುವ ಕೌಶಲ್ಯ ಹೇಗೆ ? ದಾಖಲಿಸುವ ಬಗೆ ಹೇಗೆ ? ಇತ್ಯಾದಿ ಪ್ರಶ್ನೆಗಳು ಇಂದು ನಮ್ಮ ಮುಂದಿವೆ, ಇದಕ್ಕೆ ಪೂರಕ ಸಾಹಿತ್ಯದ ಕೊರತೆ ಇದ್ದು ಇಂತಹ ಅನುಮಾನಗಳಿಗೆ ಕಾರಣವೂ ಹೌದು. ಸಮಸ್ಯೆಗಳು ಇದ್ದ ಮೇಲೆ ಪರಿಹಾರಗಳು ಖಂಡಿತವಾಗಿ ಇದ್ದೇ ಇರುತ್ತವೆ. ಇಲಾಖೆ ಈಗಾಗಲೇ ತನ್ನ ಅಂತರ್ಜಾಲ ತಾಣದಲ್ಲಿ ಮಾಹಿತಿಗಳನ್ನು ನೀಡಿದೆ. ಹಲವು ಶಿಕ್ಷಕ ಮಿತ್ರರು ಈ ಮಾಹಿತಿಗಳನ್ನು ಪಡೆದು ಅವುಗಳಿಗೆ ತಮ್ಮದೇ ಆದ ಆಲೋಚನೆಗಳನ್ನು ಬೆರೆಸಿ ಪಾಠಬೋಧನೆಗೆ ಮುಂದಾಗಿದ್ದಾರೆ. ಈ ಪ್ರಯತ್ನದಲ್ಲಿ ವಿಷಯ ಪರೀವಿಕ್ಷಕರಾದ ಶ್ರೀ ಎಸ್.ಜಿ.ಕೋಟಿ ಹಾಗೂ ಶಿಕ್ಷಕರಾದ ಶ್ರೀ ರವೀಂದ್ರ ಜಿ. ಆಹೇರಿ ಇವರು ತಮ್ಮ ಪ್ರಯತ್ನದಲ್ಲಿ ಕಂಡುಕೊಂಡ ಯಶಸ್ಸನ್ನು ಇತರ ಶಿಕ್ಷಕ ಮಿತ್ರರಿಗೂ ಪರಿಚಯಿಸಿ ಶಿಕ್ಷಕರ ಗೊಂದಲಗಳಿಗೆ ಪರಿಹಾರ ದೊರಕಿಸುವುದಕ್ಕಾಗಿ ಈ ಪುಸ್ತಕವನ್ನು ಸಿದ್ಧಪಡಿಸಿದ್ದು ಸಂತಸ ತಂದಿದೆ.

ಇಲಾಖೆಯು ಹಲವು ಮಾರ್ಪಾಡುಗಳನ್ನು ಪರಿಚಯಿಸುತ್ತಲೇ ಇದೆ, ಬದಲಾವಣೆ ಅನಿವಾರ್ಯ, ಪಠ್ಯಕ್ರಮವು ಬದಲಾಗಿದೆ, ಪಠ್ಯಪುಸ್ತಕಗಳು ಬದಲಾಗಿವೆ, ಬೋಧನಾ ವಿಧಾನಗಳು ಬದಲಾಗಿವೆ, ಮೌಲ್ಯಮಾಪನ ಕ್ರಮಗಳು ಬದಲಾಗಿವೆ. ಈ ಹಿನ್ನಲೆಯಲ್ಲಿ ನಾವುಗಳೂ ಸಹ ಸಾಂಪ್ರದಾಯಿಕ ವಿಧಾನಗಳಿಂದ ಹೊರಬಂದು, ಹೊಸ ಬದಲಾವಣೆಗಳಿಗೆ ಹೊಂದಿ ಕೊಳ್ಳಬೇಕಿದೆ. ಶಿಕ್ಷಕರ ಹಲವು ಅನುಮಾನಗಳಿಗೆ, ಗೊಂದಲಗಳಿಗೆ, ಆತಂಕಗಳಿಗೆ ಈ ಪುಸ್ತಕ ಉತ್ತರವಾಗಲಿದೆ ಎಂದು ಆಶಿಸಿದೆ.

**ಶ್ರೀಎಂ.ಡಿ.ಬಳ್ಳಾರಿ**
**ಉಪನಿರ್ದೇಶಕರು,(ಅಭಿವೃದ್ಧಿ)**

# ನಿಮ್ಮೊಂದಿಗೆ,

ಎನ್ ಸಿ ಎಫ್ 2005 ರ ಆಶಯದಂತೆ 8 ಮತ್ತು 9ನೇ ತರಗತಿಗೆ ಈಗಾಗಲೇ ಸಿಸಿಇ ಅಳವಡಿಸಲಾಗಿದ್ದು, ಅದೇ ರೀತಿ, ಈ ವರ್ಷದಿಂದ 10ನೇ ತರಗತಿಗೂ ಅಳವಡಿಸಿಕೊಳ್ಳಲಾಗುತ್ತಿದೆ. ಸಿಸಿಇ ಯ ಮೂಲ ಉದ್ದೇಶಗಳಲ್ಲಿ ಯಾವುದೇ ಬದಲಾವಣೆ ಮಾಡದೇ, ವಿದ್ಯಾರ್ಥಿಗಳ ಪ್ರಗತಿಯ ದಾಖಲೀಕರಣದಲ್ಲಿ ಸ್ವಲ್ಪ ಸರಳೀಕರಣ ಮಾಡಿ ಜಾರಿಗೆ ತರಲಾಗುತ್ತಿದೆ. ರಚನಾವಾದದ ಹಿನ್ನಲೆಯಲ್ಲಿ ಪ್ರತಿ ಅಧ್ಯಾಯದ ಕಲಿಕಾಂಶಗಳನ್ನು ವಿದ್ಯಾರ್ಥಿಯು ಚಟುವಟಿಕೆಗಳನ್ನು ಕೈಗೊಳ್ಳುವುದರ ಮೂಲಕ ಅನುಭವಿಸಿ, ಅರ್ಥೈಸಿಕೊಳ್ಳುವುದರ ಮೂಲಕ ಜ್ಞಾನವನ್ನು ಕಟ್ಟಿಕೊಳ್ಳಬೇಕಾಗಿದೆ. ಇದಕ್ಕಾಗಿ ಶಿಕ್ಷಕ ಅನುಕೂಲಕಾರನಾಗಿ ತರಗತಿ ಕೋಣೆಯಲ್ಲಿ ಚಟುವಟಿಕೆಗಳ ಮೂಲಕ ಕಲಿಕೆಯ ವಾತಾವರಣ ರೂಪಿಸಬೇಕು. ಕಲಿಕೆಯನ್ನು ವಿದ್ಯಾರ್ಥಿಯ ಜೀವನದ ಅವಶ್ಯಕತೆಗಳೊಂದಿಗೆ ಜೋಡಿಸಬೇಕು ಅಲ್ಲದೆ, ಇಂದಿನ ಹಾಗೂ ಭವಿಷ್ಯದ ಜೀವನಾವಶ್ಯಕತೆಗಳಿಗೆ, ಹೊಂದುವಂತೆ ಮಾಡಬೇಕಾಗಿರುವುದು ಅವಶ್ಯಕ. ಶಾಲೆಯ ಹೊರಗಿನ ಬದುಕಿಗೆ ಜ್ಞಾನ ಸಂಯೋಜನೆ ಮಾಡಿ, ಮಕ್ಕಳಿಂದಲೇ ಜ್ಞಾನವನ್ನು ಅಭಿವೃದ್ಧಿಪಡಿಸಬೇಕು, ಎಂಬುದು ಪ್ರಸ್ತುತ ಪಠ್ಯವಸ್ತುವಿನ ನಿರೀಕ್ಷೆಯಾಗಿದೆ.

ಈ ಒಂದು ಸಾಹಿತ್ಯದಲ್ಲಿ ಶಿಕ್ಷಕರು, ತರಗತಿ ಕೋಣೆಯಲ್ಲಿ ಅನುಕೂಲಕಾರನಾಗಿ ಹೇಗೆ ಕಲಿಕೆಯ ವಾತವರಣ ನಿರ್ಮಿಸಬೇಕು ಮತ್ತು ಕಲಿಕೆಯ ಪ್ರಗತಿಯನ್ನು ಹೇಗೆ ಮೌಲ್ಯಮಾಪನ ಮಾಡಬೇಕು,ಇದಕ್ಕೆ ಅಗತ್ಯವಾದ ತಂತ್ರಗಳು, ಸಾಧನಗಳು ಯಾವುವು, ಚಟುವಟಿಕೆಗಳನ್ನು ಬಳಸಿ ಕಲಿಕೆಯ ಪ್ರಗತಿಯನ್ನು ಹೇಗೆ ದಾಖಲಿಸಬೇಕು, ಎಂಬ ಹಲವು ಅವಶ್ಯಕ ವಿಷಯಗಳನ್ನು ತಿಳಿಯಲು, ಎಲ್ಲಾ ಶಿಕ್ಷಕರು ಖಾತರರಾಗಿರುವುದನ್ನು ಈ ಹಿಂದೆ ನಡೆದ ಕಾರ್ಯಾಗಾರಗಳಲ್ಲಿ ಕಂಡುಕೊಳ್ಳಲಾಗಿದೆ. ಶಿಕ್ಷಕರೆಲ್ಲರ ಹಲವು ಆಶಯಗಳಿಗೆ ಮತ್ತು ಪ್ರಶ್ನೆಗಳಿಗೆ, ಪೂರಕ ಸಾಹಿತ್ಯದ ಕೊರತೆಯನ್ನು ಗಮನಿಸಿ, 8–10 ನೇ ತರಗತಿಗಳಿಗೆ ಸಮಾಜ ವಿಜ್ಞಾನ ವಿಷಯ ಬೋಧಿಸುವ ಶಿಕ್ಷಕರಿಗೆ, ಉಪಯುಕ್ತ ಎನಿಸುವ ಕೆಲವು ಮಾಹಿತಿಗಳನ್ನಾದರೂ ಒದಗಿಸಬೇಕೆಂಬ ಸದೀಚ್ಛೆಯಿಂದ, ಇಲಾಖೆಯ ಅಂತರ್ಜಾಲದಲ್ಲಿ ಹಾಗೂ ಕಾರ್ಯಾಗಾರಗಳಲ್ಲಿ ಲಭ್ಯವಾದ ಮಾಹಿತಿಗಳನ್ನು ಸಂಗ್ರಹಿಸಿ **'ಸ್ಪಂದನ'** ಸಾಹಿತ್ಯವನ್ನು ಸಿದ್ಧಪಡಿಸಲಾಗಿದೆ. ಇಲಾಖೆಯು ಸೂಚಿಸಿದ ವಿವಿಧ ಮೌಲ್ಯಮಾಪನ ನಮೂನೆಗಳನ್ನು ಬಳಸಿಕೊಂಡು ಶಿಕ್ಷಕರಿಗೆ ಉದಾಹರಣೆ ಸಹಿತವಾಗಿ ರೂಪಣಾತ್ಮಕ ಮತ್ತು ಸಂಕಲನಾತ್ಮಕ ಮೌಲ್ಯಮಾಪನಗಳಿಂದ ದೊರೆತ ಅಂಕಗಳನ್ನು ಸಂಯೋಜಿಸಿ, ಉತ್ತೀರ್ಣತಾ ಶ್ರೇಣಿಗಳನ್ನು ಈ ಸಾಹಿತ್ಯದಲ್ಲಿ ಉದಾಹರಿಸಲಾಗಿದೆ. ವರ್ಗ ಬೋಧನೆಯಲ್ಲಿ ನಿರಂತರ ಮತ್ತು ವ್ಯಾಪಕ ಮೌಲ್ಯಮಾಪನ ಅಳವಡಿಕೆ ಶಿಕ್ಷಕರೆಲ್ಲರಿಗೂ ಸುಲಭವಾಗಬೇಕು ಮತ್ತು ವಿಷಯದ ಮನವರಿಕೆಯಾಗಬೇಕೆಂಬುದು ನಮ್ಮ ಉದ್ದೇಶವಾಗಿದೆ. ಈ ಸಾಹಿತ್ಯದಲ್ಲಿ ವಿವರಿಸಿದ ವಿಷಯಗಳೆಲ್ಲವೂ ಅಂತಿಮವಲ್ಲ, ಕಾರ್ಯನಿರತ ಶಿಕ್ಷಕರು ಇದಕ್ಕಿಂತಲೂ ಉತ್ತಮ ಹಾಗೂ ಸೂಕ್ತವೆನಿಸಬಹುದಾದ ಪ್ರಯತ್ನಗಳನ್ನು ಕೈಗೊಳ್ಳಬಹುದು. ಶಿಕ್ಷಕರ ಹಲವು ಅನುಮಾನಗಳಿಗೆ 'ಸ್ಪಂದನ' ಸಾಹಿತ್ಯವು ನೆರವಾಗಲೆಂಬುದು ನಮ್ಮ ಆಶಯ.

ಈ ಸಾಹಿತ್ಯವನ್ನು ಸಿದ್ಧಪಡಿಸುವ ಪ್ರಯತ್ನದಲ್ಲಿ ಶಿಕ್ಷಕರಾದ ಶ್ರೀ ಎಸ್.ಎಫ್.ಜಂಗ್ಲೆಪ್ಪನವರ ಇವರ ಸಹಾಯವನ್ನು ಸದಾ ನೆನೆಯುತ್ತೇವೆ. ಈ ಸಾಹಿತ್ಯವು ಹೊರಬರುವಲ್ಲಿ ಜಿಲ್ಲೆಯ ಎಲ್ಲ ಶಿಕ್ಷಕ, ಶಿಕ್ಷಕಿಯರ ಅಪೇಕ್ಷಗಳನ್ನು ಹಾಗೂ ಈ ಸಾಹಿತ್ಯಕ್ಕೆ ಪ್ರೋತ್ಸಾಹ ನೀಡಿದ, ಜಿಲ್ಲೆಯ ಎಲ್ಲಾ ಅಧಿಕಾರಿಗಳನ್ನು ಮನಃ ಪೂರ್ವಕವಾಗಿ ಸ್ಮರಿಸುತ್ತೇವೆ.

**ಶ್ರೀ ಆರ್ ಜಿ ಆಹೇರಿ.**

ಕಲಾ ಶಿಕ್ಷಕರು.
ಸರಕಾರಿ ಪ್ರೌಢ ಶಾಲೆ. ಕೋಣನಕೇರಿ.
ತಾ: ಶಿಗ್ಗಾಂವ ಜಿ: ಹಾವೇರಿ
**ಮೊ: 81473 89347:** http://socialsciencecce.blogspot.com

**ಶ್ರೀ ಎಸ್. ಜಿ. ಕೋಟಿ**

ವಿಷಯ ಪರಿವೀಕ್ಷಕರು,
ಸಾರ್ವಜನಿಕ ಶಿಕ್ಷಣ ಇಲಾಖೆ, ಹಾವೇರಿ
**ಮೊ: 99861 72674**

## ಪರಿವಿಡಿ


| ಕ್ರ.ಸಂ | ವಿಷಯ | ಪುಟ ಸಂಖ್ಯೆ |
|---|---|---|
| 1. | ನಿರಂತರ ಮತ್ತು ವ್ಯಾಪಕ ಮೌಲ್ಯಮಾಪನ | |
| 2. | ಸಮಾಜ ವಿಜ್ಞಾನದಲ್ಲಿ ಬಳಸಬಹುದಾದ ಸರಳ ತಂತ್ರ ಮತ್ತು ಸಾಧನಗಳು. | |
| 3. | ವಾರ್ಷಿಕ ಯೋಜನೆ ಮತ್ತು ಘಟಕ(ಪಾಠ)ಯೋಜನೆ | |
| 4. | 10ನೇ ತರಗತಿ ರೂಪಣಾತ್ಮಕ (ಆಂತರಿಕ) ಮೌಲ್ಯಮಾಪನದ ರೂಪರೇಷಗಳು.<br>– ಅಂಕಗಳ ಹಂಚಿಕೆ | |
| 5. | ಚಟುವಟಿಕೆಗಳನ್ನು ಮೌಲ್ಯಮಾಪನ ಮಾಡುವ ಬಗೆ<br>- ಮಾನಕಗಳು ಮತ್ತು ನಮೂನೆಗಳು.<br>- ಸಾಧನಾ ಪರೀಕ್ಷೆಯ ರೂಪರೇಷ | |
| 6. | ಸಂಕಲನಾತ್ಮಕ (ಬಾಹ್ಯ) ಮೌಲ್ಯಮಾಪನ<br>- ನೀಲಿ ನಕಾಶೆಯ ರೂಪರೇಷ<br>- ಮಾದರಿ ಪ್ರಶ್ನೆ ಪತ್ರಿಕೆ | |
| 7. | ಶಿಕ್ಷಕರು ನಿರ್ವಹಿಸಬೇಕಾದ ದಾಖಲೆಗಳು | |
| 8. | ಉದ್ದಿಷ್ಟ ಮತ್ತು ನಿದಿಷ್ಟಗಳಿಗೆ ಉದಾಹರಣೆಗಳು. | |
| 9. | 10ನೇ ತರಗತಿ ಪಠ್ಯವಿಭಜನೆ ಮತ್ತು | |
| 10. | ವಾರ್ಷಿಕ ಅಂದಾಜು ಪಾಠ ಯೋಜನೆ | |
| 11. | 8 ಮತ್ತು 9ನೇ ತರಗತಿಗಳಿಗೆ ನಿರ್ವಹಿಸಬಹುದಾದ ನಮೂನೆಗಳು<br>- ಚಟುವಟಿಕೆಗಳ ತಪಶೀಲು ವಹಿ<br>- ಶಿಕ್ಷಕರ ವಯಕ್ತಿಕ ದಾಖಲು ವಹಿ.<br>- ಶಿಕ್ಷಕರ ಕ್ರೋಢೀಕರಣ ವಹಿ.<br>- ಶಿಕ್ಷಕರ ಡೈರಿ/ಸಾಂಧರ್ಬಿಕ ದಾಖಲೆ.<br>- ಕೃತಿ ಸಂಪುಟ. | |
| 12. | ಆಕರಗಳು. | |

## ನಿರಂತರ ಮತ್ತು ವ್ಯಾಪಕ ಮೌಲ್ಯಮಾಪನ

ನಿರಂತರ ಮತ್ತು ವ್ಯಾಪಕ ಮೌಲ್ಯಮಾಪನದ ಬಗ್ಗೆ ಸಂಕ್ಷಿಪ್ತವಾಗಿ ಹೇಳುವುದಾದರೆ ವಿದ್ಯಾರ್ಥಿಗಳ ಕಲಿಕಾ ಚಟುವಟಿಕೆ, ಸಹಪಠ್ಯ ಚಟುವಟಿಕೆ ಮತ್ತು ಸಹಜ ವರ್ತನೆಗಳನ್ನು ನಿರಂತರ ಹಾಗೂ ವ್ಯಾಪಕವಾಗಿ ಗಮನಿಸಿ, ನಿರ್ದಿಷ್ಟ ಪಡಿಸಿದ ಪಠ್ಯಕ್ಕೆ ಸೀಮಿತವಾಗದೇ ಮಗುವನ್ನು ವಿವಿಧ ಆಯಾಮಗಳಲ್ಲಿ ಅರ್ಥೈಸಿಕೊಳ್ಳುವುದಾಗಿದೆ. ಇದರಿಂದಾಗಿ ಶಿಕ್ಷಕರ ಸ್ವ ಅವಲೋಕನದ ಮೂಲಕ ಮಗುವಿನ ಬೆಳವಣಿಗೆ ಮತ್ತು ಅಭಿವೃದ್ಧಿಯನ್ನು ಪೋಷಿಸಲು ಸಾಧ್ಯ.

**<u>ನಿರಂತರ ಮತ್ತು ವ್ಯಾಪಕ ಮೌಲ್ಯಮಾಪನದ ವಿಧಗಳು:</u>**

**ಅ. ರೂಪಣಾತ್ಮಕ ಮೌಲ್ಯಮಾಪನ(Formative Assessment)** : ಮಗುವಿನ ಪಠ್ಯ, ಸಹಪಠ್ಯ ಮತ್ತು ಸಹಜ ವರ್ತನೆಗಳನ್ನು ನಿರಂತರ ಹಾಗೂ ವಿವಿಧ ಆಯಾಮಗಳಲ್ಲಿ ಅರ್ಥೈಸಿಕೊಳ್ಳುವುದು. ಹಿಮ್ಮಾಹಿತಿ, ಸ್ವ ಅವಲೋಕನ, ಚರ್ಚೆಗಳ ಮೂಲಕ ಮಗುವಿನ ಬೆಳವಣಿಗೆ ಮತ್ತು ಅಭಿವೃದ್ಧಿಗೆ ನಿರಂತರವಾಗಿ ಶ್ರಮಿಸುವುದು.

**ಆ. ಸಂಕಲನಾತ್ಮಕ ಮೌಲ್ಯಮಾಪನ (Summative Assessment)** : ಶಿಕ್ಷಕರು ಕಲಿಕೆಯನ್ನು ಅನುಕೂಲಿಸುತ್ತಾ ಒಂದು ತಾರ್ಕಿಕ ಅಂತ್ಯದಲ್ಲಿ ಕಲಿಕೆಯನ್ನು ಪರೀಕ್ಷೆ, ಚಿತ್ರ, ಪ್ರದರ್ಶನ, ಚರ್ಚೆ, ಯೋಜನೆ ಇತ್ಯಾದಿ ಚಟುವಟಿಕೆಗಳ ಮೂಲಕ ಮಾಪಿಸಿ ಕಲಿಕೆಯ ಪ್ರಗತಿಯನ್ನು ದಾಖಲಿಸುವುದು.

**<u>ಸಿ.ಸಿ.ಇ. ಉದ್ದೇಶಗಳು</u>**

ನಿರಂತರ ಮತ್ತು ವ್ಯಾಪಕ ಮೌಲ್ಯಮಾಪನದ ಉದ್ದೇಶಗಳನ್ನು ಈ ಹಿಂದಿನ ನಿರಂತರ, ಸಾಧನ ಮತ್ತು ಸಾಧನ ಪುಷ್ಠಿ ಸಾಹಿತ್ಯಗಳಲ್ಲಿ ವಿವರವಾಗಿ ಚರ್ಚಿಸಿದೆ. ಇಲ್ಲಿ ಸದರಿ ಉನ್ನತ ಉದ್ದೇಶಗಳನ್ನು ಪುನರ್‌ಸ್ಮರಿಸುವ ನಿಮಿತ್ತ ಈ ಕೆಳಗೆ ಮತ್ತೊಮ್ಮೆ ಪಟ್ಟಿ ಮಾಡಿದೆ.

- ಮಗುವನ್ನು ವಿವಿಧ ಆಯಾಮಗಳಲ್ಲಿ ಅರ್ಥೈಸಿಕೊಳ್ಳುವುದು.
- ಮಗುವಿನ ಸಮಗ್ರ ವ್ಯಕ್ತಿತ್ವನ್ನು ರೂಪಿಸುವುದು.
- ಮಗುವಿನ ಕೊರತೆ ಹಾಗೂ ಸಾಧನೆಗಳನ್ನು ಗಮನಿಸಿ ಸೂಕ್ತ ಹಿಮ್ಮಾಹಿತಿಯನ್ನು ನೀಡುವುದು.
- ಕಲಿಸುವವರು, ಕಲಿಯುವವರು ಮತ್ತು ಪೋಷಕರು ಈ ಮೌಲ್ಯಮಾಪನವನ್ನು ಸ್ವಾವಲೋಕನ ಸಾಧನವಾಗಿ ಬಳಸಿಕೊಳ್ಳುವುದು.

**<u>ಒಂಭತ್ತನೇ ತರಗತಿಯವರಿಗೆ ಸರ್ಕಾರಿ, ಅನುದಾನಿತ ಮತ್ತು ಖಾಸಗಿ ಶಾಲೆಗಳಲಿ ನಿರಂತರ ಮತ್ತು ವ್ಯಾಪಕ ಮೌಲ್ಯಮಾಪನ.</u>**

- ಸ್ಕೊಲ್ಯಾಸ್ಟಿಕ್ ವಿಷಯಗಳಲ್ಲಿ ಸಂಕಲನಾತ್ಮಕ ಮೌಲ್ಯಮಾಪನವನ್ನು 5 ರಿಂದ 9ನೇ ತರಗತಿಯವರೆಗೆ 50 ಅಂಕಗಳಿಗೆ (40 ಲಿಖಿತ + 10 ಮೌಖಿಕ) ಪ್ರತಿ ವಿಷಯದಲ್ಲಿ ಹಮ್ಮಿಕೊಳ್ಳುವುದು. ನಂತರ ಅದನ್ನು ಶೇ. 30 ಕ್ಕೆ ಪರಿವರ್ತಿಸಿಕೊಳ್ಳುವುದು. ಆದರೆ 9ನೇ ತರಗತಿಯ ಎರಡನೇ ಸಂಕಲನಾತ್ಮಕ ಮೌಲ್ಯಮಾಪನವನ್ನು ಇಡೀ ಶೈಕ್ಷಣಿಕ ವರ್ಷದ ಪಠ್ಯವನ್ನು ಆಧರಿಸಿ 100 ಅಂಕಗಳಿಗೆ ಕೈಗೊಳ್ಳುವುದು (90 ಲಿಖಿತ + 10 ಮೌಖಿಕ) ನಂತರ ಅದನ್ನು 60% ಕ್ಕೆ ಪರಿವರ್ತಿಸಿಕೊಳ್ಳುವುದು.

**<u>ಮೊದಲನೇ ಸೆಮಿಸ್ಟರ್/ಅರ್ಧವಾರ್ಷಿಕ ಅವಧಿ</u>**

– ರೂ.ಮೌ– 1 (FA-1) ಕ್ರೋಢೀಕರಣ – ಜುಲೈ ತಿಂಗಳ ಕೊನೆಯವಾರದಲ್ಲಿ – 10%

– ರೂ.ಮೌ– 2 (FA-2) ಕ್ರೋಢೀಕರಣ – ಸೆಪ್ಟೆಂಬರ್ 2ನೇ ವಾರದಲ್ಲಿ – 10%

– ಸಂ.ಮೌ– 1 (SA1) – ಸೆಪ್ಟೆಂಬರ್ ಕೊನೆವಾರದಲ್ಲಿ – 30%

**ಮೊದಲ ಸೆಮಿಸ್ಟರ್ ಒಟ್ಟು – 50%**

**<u>ಎರಡನೇ ಸೆಮಿಸ್ಟರ್/ಅರ್ಧವಾರ್ಷಿಕ ಅವಧಿ</u>**

– ರೂ.ಮೌ–3 (FA-3) ಕ್ರೋಢೀಕರಣ – ಡಿಸೆಂಬರ್ ಕೊನೆಯವಾರದಲ್ಲಿ – 10%

– ರೂ.ಮೌ–4 (FA-4) ಕ್ರೋಢೀಕರಣ – ಮಾರ್ಚ್ 3ನೇ ವಾರದಲ್ಲಿ – 10%

– ಸಂ.ಮೌ– 2 (SA-2) – ಮಾರ್ಚ್ ಕೊನೆಯವಾರದಲ್ಲಿ – 30%

**ಪ್ರತಿ ವಿಷಯದ ವಾರ್ಷಿಕ ಒಟ್ಟು – 100%**

## ಸಮಾಜ ವಿಜ್ಞಾನದಲ್ಲಿ ಬಳಸಬಹುದಾದ ಸರಳ ತಂತ್ರ ಮತ್ತು ಸಾಧನಗಳು.

| ಕ್ರ.ಸಂ | ಚಟುವಟಿಕೆಗಳು | ತಂತ್ರ | ಸಾಧನಗಳು |
|---|---|---|---|
| 1. | • ಚರ್ಚೆಗಳು.<br>• ರಸಪ್ರಶ್ನೆ.<br>• ಪಠ್ಯಪುಸ್ತಕ ಅವಲೋಕನ.<br>• ಮಂಡನೆಗಳು.<br>• ಮಾದರಿ ತಯಾರಿಕೆ.<br>• ವಿಚಾರ ಸಂಕೀರ್ಣ<br>• ಪಾತ್ರಾಭಿನಯ.<br>• ನಾಟಕಗಳು.<br>• ಚಿತ್ರಗಳ ಸಂಗ್ರಹ.<br>• ಭಾಷಣ. | ಅವಲೋಕನ | • ಅವಲೋಕನ ಪಟ್ಟಿ.<br>(ಶಿಕ್ಷಕರ ಮತ್ತು ವಿದ್ಯಾರ್ಥಿಗಳ)<br>• ಸಾಂದರ್ಭಿಕ ದಾಖಲೆ.<br>• ವ್ಯಕ್ತಿ ವೃತ್ತಾಂತ ದಾಖಲೆ.<br>• ತನಿಖಾ ಪಟ್ಟಿ.<br>• ದರ್ಜಾಮಾಪನಿ<br>(ಇವುಗಳಲ್ಲಿ ಯಾವುದಾದರು ಒಂದು ಬಳಸಬಹುದು) |
| 2. | • ಭೇಟಿ.<br>• ಮಾಹಿತಿ ಸಂಗ್ರಹ.<br>• ಕ್ಷೇತ್ರ ಅಧ್ಯಯನ.<br>• ಸಮೀಕ್ಷೆ.<br>• ಪ್ರವಾಸ | • ಸಂದರ್ಶನ<br>• ವೀಕ್ಷಣೆ | • ಔಪಚಾರಿಕ ಪ್ರಶ್ನೆಗಳು.<br>• ಅನೌಪಚಾರಿಕ ಪ್ರಶ್ನೆಗಳು.<br>• ತಪಶೀಲು ಪಟ್ಟಿ |
| 3. | • ಆಲ್ಬಂ ತಯಾರಿಕೆ.<br>• ವರದಿ ತಯಾರಿಕೆ.<br>• ವಸ್ತುಗಳ ಸಂಗ್ರಹ.<br>• ನಕಾಶೆ ಬರೆಯುವದು.<br>• ಮಾದರಿ ತಯಾರಿಸುವದು<br>• ಚಾರ್ಟ ತಯಾರಿಸುವದು.<br>• ವಸ್ತು ಪ್ರದರ್ಶನ. | • ಯೋಜನಾ ಕಾರ್ಯ | • ಕ್ಷೇತ್ರ ಅಧ್ಯಯನ.<br>• ತಪಶೀಲು ಪ್ರಶ್ನೆಗಳು. |
| 4. | • ಬರವಣಿಗೆ.<br>• ಪ್ರಯೋಗ. | • ಪರೀಕ್ಷಣ | • ಲಿಖಿತ ಪ್ರಶ್ನೆಗಳು.<br>• ಮೌಖಿಕ ಪ್ರಶ್ನೆಗಳು.<br>• ಘಟಕ,ಮಾಸಿಕ ಪ್ರಶ್ನೆ ಪತ್ರಿಕೆ.<br>• ಪ್ರಾಯೋಗಿಕ.<br>• ನೈದಾನಿಕಪರೀಕ್ಷೆ.<br>• ಅಭ್ಯಾಸ ಪ್ರಶ್ನೆಗಳು. |
| 5. | • ಸ್ವ ವಿಮರ್ಶೆ.<br>(ಶಿಕ್ಷಕ,ಪಾಲಕ ಮತ್ತು ವಿದ್ಯಾರ್ಥಿ) | • ಸ್ವಮೌಲ್ಯಮಾಪನ | • ತಪಶೀಲು ಪ್ರಶ್ನೆಗಳು<br>(ಲಿಖಿತ, ಅಲಿಖಿತ) |
| 6. | • ಉತ್ತರಿಸುವಿಕೆ.<br>• ಬಿಡಿಸುವಿಕೆ.<br>• ಸಂದರ್ಶನ.<br>• ಗುರುತಿಸುವಿಕೆ. | • ಅವಲೋಕನ | • ವರ್ಕಬುಕ್ |

## ಸಮಾಜ ವಿಜ್ಞಾನ ಬೋಧನೆಯಲ್ಲಿ ಅಳವಡಿಸಿಕೊಳ್ಳಬಹುದಾದ ಬೋಧನಾ ವಿಧಾನಗಳು

- ಕಥಾ ನಿರೂಪಣ ಪದ್ಧತಿ.
- ಯೋಜನಾ ಪದ್ಧತಿ.
- ಪಠ್ಯಪುಸ್ತಕ ಅವಲೋಕನ ಪದ್ಧತಿ.
- ಚರ್ಚಾ ಪದ್ಧತಿ.
- ಸಮಸ್ಯಾ ಪರಿಹಾರ ಪದ್ದತಿ.
- ಮೂಲಾಧಾರ ಪದ್ಧತಿ.
- ಜೀವನ ವೃತ್ತಾಂತ ಪದ್ಧತಿ.
- ಉಪನ್ಯಾಸ ಪದ್ಧತಿ.
- ಘಟಕ ಪದ್ಧತಿ.
- ವೀಕ್ಷಣಾ ಪದ್ಧತಿ.
- ಪ್ರವಾಸ ಪದ್ಧತಿ.
- ನಾಟಕಾಭಿನಯ/ಪಾತ್ರಾಭಿನಯ ಪದ್ಧತಿ.
- ಕ್ಷೇತ್ರ ಅಧ್ಯಯನ ಪದ್ಧತಿ.
- ಪ್ರಾದೇಶಿಕ ಪದ್ಧತಿ.
- ಪ್ರಯೋಗ ಶಾಲಾ ಪದ್ಧತಿ.
- ವರ್ಣನಾ ಪದ್ಧತಿ.
- ಕ್ರೀಡಾ ಪದ್ಧತಿ.
- ಪ್ರಶ್ನೋತ್ತರ ಪದ್ದತಿ.
- ಸಂಶೋಧನಾ ಪದ್ಧತಿ.
- ಸಮೀಕ್ಷಣಾ ಪದ್ಧತಿ.
- ವಿಶ್ಲೇಷಣಾ ಪದ್ಧತಿ.

## ಯೋಜನೆ

ಯೋಜನೆ ಸ್ವಯಂ ಕಲಿಕೆಗೆ ಪೂರಕವಾಗುವ ಒಂದು ಮಾಧ್ಯಮ. ಸಮಾಜ ವಿಜ್ಞಾನ ವಿಷಯದ ಬಹುತೇಕ ಅಂಶಗಳು ಅಮೂರ್ತ ಸ್ವರೂಪದವುಗಳಾಗಿದ್ದು ಈ ಅಂಶಗಳಿಗೆ ಮೂರ್ತ ರೂಪವನ್ನು ಯೋಜನೆ ಬಹುಮಟ್ಟಿಗೆ ನೀಡುತ್ತದೆ. ವಿಕ್ಷಣೆ,ಅನುಕರಣೆ,ಅವಲೋಕನ,ಸಂದರ್ಶನ,ಕ್ಷೇತ್ರದರ್ಶನ ಇತ್ಯಾದಿಗಳ ಮೂಲಕ ಸಂಗ್ರಹವಾಗುವ ಮಾಹಿತಿಯೇ ಜ್ಞಾನ, ಇದನ್ನು ಪಡೆಯಲು ವಿದ್ಯಾರ್ಥಿಗಳು ಸ್ವಯಂ ಕಲಿಕೆಯಲ್ಲಿ ತೊಡಗಬೇಕು ಮತ್ತು ತಮ್ಮ ಜ್ಞಾನವನ್ನು ತಾವೇ ಕಟ್ಟಿಕೊಳ್ಳಬೇಕು. ಇದಕ್ಕಾಗಿ ಯೋಜನೆಗಳು ಬಹಳ ಮಹತ್ವದ ಪಾತ್ರವಹಿಸುತ್ತವೆ.

**ಯೋಜನೆಯ ಹಂತಗಳು:**

1. **ಉದ್ದೇಶ ನಿರೂಪಣೆ.**
2. **ಕ್ರಿಯಾಯೊಜನೆಯ ತಯಾರಿ.**
3. **ಕ್ರಿಯಾ ಯೋಜನೆಯ ಅನುಷ್ಠಾನ.**
4. **ವರದಿ ತಯಾರಿಸುವದು.**
5. **ಅನುಭವಗಳ ಹಂಚಿಕೆ/ಮಂಡನೆ.**

### ಮಾದರಿ ಕ್ರಿಯಾ ಯೋಜನೆ

### ಯೋಜನೆಯ ವಿಷಯ: ಪ್ರಾಚೀನ ನಾಗರಿಕತೆಗಳ ತುಲನಾತ್ಮಕ ಅಧ್ಯಯನ

**ಅವಧಿ: 15** **ಗುಂಪಿನಲ್ಲಿ ರಚನೆ**

**ಆಶಯ:**

1. ಪ್ರಾಚೀನ ನಾಗರಿಕತೆಗಳ ಪರಿಚಯಮಾಡಿಕೊಳ್ಳುವದು.
2. ಹೊಲಿಸಿ ನೋಡುವದನ್ನು ಕಲಿಯುವದು.
3. ಅಂದಿನ ಮತ್ತು ಇಂದಿನ ನಾಗರಿಕತೆಯಲ್ಲಿ ಕಂಡುಬರುವ ವ್ಯತ್ಯಾಸವನ್ನು ಅರೆಯುವದು.

**ವಿಧಾನ:**

1. ಪ್ರಾಚೀನ ನಾಗರಿಕತೆಗಳು ಯಾವವು ಎಂಬುದನ್ನು ಮೊದಲು ಗುರುತಿಸುವದು.
2. ಪೂರಕ ಸಾಹಿತ್ಯಗಳನ್ನು ಅಧ್ಯಯನ ಮಾಡಿ ಕಾಲ್ಪನಿಕ ತಃಖ್ತೆ ತಯಾರಿಸುವದು.
3. ಸಾಮಾನ್ಯ ಅಂಶಗಳು ಮತ್ತು ವಿಶಿಷ್ಟ ಅಂಶಗಳನ್ನು ಪಟ್ಟಿ ಮಾಡುವದು.( ಜನಜೀವನ,ನಗರ ವ್ಯವಸ್ಥೆ,ಉದ್ಯೋಗ,ಉಡುಗೆ,ತೊಡುಗೆ,ಕಲೆ,ಲಿಪಿ..)
4. ಪ್ರಪಂಚದ ನಕಾಶೆಯಲ್ಲಿ ನಾಗರಿಕತೆಗಳನ್ನು ಗುರುತಿಸುವದು.
5. ತಮ್ಮ ನಾಗರಿಕತೆಗೆ ಹೋಲಿಸುವದು.
6. ಕಾಲಾನುಕ್ರಮವಾಗಿ ಬರೆಯುವದು.
7. ಬಿತ್ತಿ ಪತ್ರ ತಯಾರಿಸುವದು.
8. ವರದಿ ತಯಾರಿಸಿ ಮಂಡಿಸುವದು.

**ಮಾಹಿತಿಯ ಮೂಲಗಳು:** * ಭೂಪಟ. * ಇತಿಹಾಸ ಪುಸ್ತಕಗಳು. * ಇತಿಹಾಸ ಪರಿಣಿತರು. * ಅಂತರಜಾಲ

**(ಶಿಕ್ಷರು ತಪಶೀಲು ಪ್ರಶ್ನೆಗಳನ್ನು ತಯಾರಿಸಿಕೊಂಡು ವರದಿಯನ್ನು ಮೌಲ್ಯಮಾಪನ ಮಾಡುವದು)**

# ಮಾನಕಗಳ ಮಾದರಿಗಳು

| ಕ್ರ.ಸಂ | ಚಟುವಟಿಕೆ | ಸಾಧನಗಳು | ಮಾನಕಗಳು | ಅಂಕಗಳು |
|---|---|---|---|---|
| 1. | ಚರ್ಚೆ | ತಪಶೀಲು ಪಟ್ಟಿ. | 1. ಮಗು ತನ್ನ ವಾದವನ್ನು ತಾರ್ಕಿಕವಾಗಿ ಮಂಡನೆ ಮಾಡಿದೆ.<br>2. ವಿಷಯದ ಮೇಲೆ ಪ್ರಭುತ್ವ ಹೊಂದಿದೆ.<br>3. ಮಾತನಾಡುವಾಗ ಉಚ್ಛಾರಣೆ,ವೇಗ ಮತ್ತು ಸರಾಗತೆ ಇದೆ.<br>4. ವಿಮಾರ್ಷಾತ್ಮಕ ಚಿಂತನೆ ವ್ಯಕ್ತಪಡಿಸಿದನು.<br>5. ಟೀಕೆಗಳನ್ನು ಧನಾತ್ಮಕವಾಗಿ ಸ್ವೀಕರಿಸಿದನು. | |
| ಒಟ್ಟು ನಿಗದಿತ ಅಂಶಗಳು | | | | |
| 2. | ಗುಂಪು ಚರ್ಚೆ | ತಪಶೀಲು ಪಟ್ಟಿ. | 1. ಗುಂಪಿನಲ್ಲಿ ನಾಯಕತ್ವ ಗುಣ ಹೊಂದಿರುವನು.<br>2. ವಿಷಯದ ಮೇಲೆ ಪ್ರಭುತ್ವ ಹೊಂದಿರುವನು.<br>3. ವಾದಸರಣಿ ಮಂಡನೆ ಸರಿ ಇದೆ.<br>4. ಸಹವರ್ತಿಗಳನ್ನು ಗೌರವಿಸಿದನು.<br>5. ಸಂವಹನ ಕೌಶಲ್ಯ ಉತ್ತಮವಾಗಿದೆ.<br>6. ಆಂಗಿಕ ಭಾಷೆ ಸರಿಯಾಗಿತ್ತು.<br>7. ಸಂದರ್ಭಕ್ಕೆ ಅಗತ್ಯ ಅಂಶಗಳನ್ನು ಎತ್ತಿ ಹಿಡಿದನು.<br>8. ಇತರರ ವಾದಕ್ಕೆ ಅವಕಾಶ ಮಾಡಿದನು. | |
| ಒಟ್ಟು ನಿಗದಿತ ಅಂಶಗಳು | | | | |
| 3. | ಯೋಜನೆ | ತಪಶೀಲು ಪಟ್ಟಿ | 1. ಯೋಜನೆಗೆ ಸಂಬಂಧಪಟ್ಟ ಜ್ಞಾನವಿದೆ.<br>2. ಸೌಂದರ್ಯೋಪಾಸನೆಯ ಕೌಶಲಗಳನ್ನು ಪ್ರತಿಬಿಂಬಿಸಿವೆ.<br>3. ಯೋಜನೆಯ ಪರಿಕಲ್ಪನೆ ಅರ್ಥೈಸಿಕೊಂಡಿರುವನು.<br>4. ವಿಷಯಕ್ಕೆ ಸಂಬಂಧಿಸಿದ ದತ್ತಾಂಶಗಳನ್ನು ಸಂಗ್ರಹಿಸಿರುವನು.<br>5. ಯೋಜನೆಗೆ ಪೂರಕವಾದ ವಿಷಯವನ್ನು ಸಂಗ್ರಹಿಸಿರುವನು. | |
| ಒಟ್ಟು ನಿಗದಿತ ಅಂಶಗಳು | | | | |
| 4. | ಪ್ರಬಂಧ | ತಪಶೀಲು ಪಟ್ಟಿ | 1. ವಿದ್ಯಾರ್ಥಿಗೆ ಪ್ರಬಂಧದ ಪರಿಕಲ್ಪನೆ ಅರ್ಥವಾಗಿದೆ.<br>2. ಪ್ರಬಂಧ ಬರವಣಿಗೆಯ ನಿಯಮಗಳನ್ನು ಅನುಸರಿಸಿರುವನು.<br>3. ಸೃಜನಶೀಲತೆಯ ಅಂಶಗಳಿವೆ.<br>4. ಇತರ ಮೂಲಗಳಿಂದ ಮಾಹಿತಿ ಸಂಗ್ರಹಿಸಿರುವನು.<br>5. ನೈಜ ಅನುಭವವಗಳನ್ನು ದಾಖಲಿಸಿರುವನು.<br>6. ಒಟ್ಟಾರೆ ವಿಷಯ ಮಂಡನೆ ಪ್ರಭಾವಶಾಲಿಯಾಗಿದೆ. | |
| ಒಟ್ಟು ನಿಗದಿತ ಅಂಶಗಳು | | | | |

| ಕ್ರ.ಸಂ | ಚಟುವಟಿಕೆ | ಸಾಧನಗಳು | ಮಾನಕಗಳು | ಕೆಲವೊಮ್ಮೆ 1 ಅಂಶ | ಯಾವಾಗಲೂ 2 ಅಂಶ | ಯಾವಾಗಲೂ ಇಲ್ಲಾ 0 ಅಂಶ |
|---|---|---|---|---|---|---|
| 4. | ಮಾದರಿ ತಯಾರಿಕೆ | ದರ್ಜಾ ಮಾಪನ | 1. ಜೊತಗಾರರ ಆಲೋಚನೆ ಮೆಚ್ಚುವ ಮನೋಭಾವವಿದೆ<br>2. ಸೃಜನಶೀಲತೆಯನ್ನು ಬಿಂಬಿಸುತ್ತವೆ.<br>3. ಪರೀಕಲ್ಪನೆಗೆ ತಕ್ಕಂತೆ ಮಾದರಿ ರಚಿಸಿದ್ದಾನೆ.<br>4. ಉತ್ತಮ ಪ್ರದರ್ಶನ ಕಾಣುತ್ತಿದೆ.<br>5. ತಾಳ್ಮೆಯ ಗುಣ ಹೊಂದಿರುವನು. | | | |

# ವಾರ್ಷಿಕ ಯೋಜನೆ

ಪಠ್ಯವಿಷಯ : ಸಮಾಜವಿಜ್ಞಾನ     ಶಾಲೆಯ ಹೆಸರು :     ಶಿಕ್ಷಕರ ( ಅನುಕೂಲಕಾರರ ) ಹೆಸರು :

| ತಿಂಗಳು | ಘಟಕ | ಅವಧಿಗಳು | ಜ್ಞಾನ ರಚನಾ ಅಂಶಗಳು | ಬೇಕಾಗುವ ಅವಧಿ | ಅವಧಿ ಬಳಕೆ | ಪಾಠ ಸಾಗಿದೆ | ಪಾಠ ಸಾಗಿಲ್ಲ/ ಇಲ್ಲವಾದಲ್ಲಿ ಕಾರಣ | ಕಲಿಕೆ ಅನುಕೂಲಿಸುವ ವಿಧಾನ | ಜ್ಞಾನ ರಚನಾ ಸಾಮಗ್ರಿಗಳು | ಚಟುವಟಿಕೆ | ಮನೆಗೆಲಸ | ಮೌಲ್ಯಮಾಪನ | ಮನನ ಮಾಡಿಕೊಳ್ಳುವ ಅಂಶಗಳು | ಅನುಕೂಲಕಾರರ ಸಹಿ | ಮುಖ್ಯಸ್ಥರ ಸಹಿ |
|---|---|---|---|---|---|---|---|---|---|---|---|---|---|---|---|
| 1 | 2 | 3 | 4 | 5 | 6 | 7 | 8 | 9 | 10 | 11 | 12 | 13 | 14 | 15 | 16 |
| ಜೂನ್ – 25 | ಇತಿಹಾಸ – 1 ಭಾರತಕ್ಕೆ ಯುರೋಪಿಯನ್ನರ ಆಗಮನ | 1<br>2<br>3 | ಭಾರತಕ್ಕೆ ಯುರೋಪಿಯನ್ನರ ಆಗಮನ<br>ಕರ್ನಾಟಿಕ್ ಯುದ್ಧಗಳು<br>ಪ್ಲಾಸಿಕದನ, ದ್ವಿ–ಸರ್ಕಾರ ಪದ್ಧತಿ<br>ಬ್ರಿಟಿಷರ ಆಕ್ರಮಣ ನೀತಿ | 3 | 1<br>1<br>1 | | | ಚರ್ಚಾ ವಿಧಾನ, ಯೋಜನೆ, ಪ್ರಶ್ನೋತ್ತರವಿಧಾನ | ಪ್ರಪಂಚ ನಕ್ಷೆ, ದಿಕ್ಸೂಚಿ, ಅಂತರ್ಜಾಲ, ಭೂಗೋಳ ಸಂಗಾತಿ, ಭಾರತದ ನಕ್ಷೆ | ಪ್ರಪಂಚ ನಕಾಶೆಯಲ್ಲಿ ಸಮುದ್ರ ಮಾರ್ಗ ಗುರುತಿಸುವದು | ಗೃಹಪಾಠ – ಹೊಸ ಹೊಸ ಭೂಖಂಡಗಳ ಸಂಶೋಧನೆಯ ು ಮಾಹಿತಿ ಸಂಗ್ರಹಿಸಿರಿ. | ರೂ. ಮೌ. – 1 | ವಿದೇಶಿ ವ್ಯಾಪಾರ, ವಿಶ್ವ ಬ್ರಾತೃತ್ವ, | | |

- ವಾರ್ಷಿಕ ಯೋಜನೆ ಶಿಕ್ಷಕರಿಗೆ ಒಂದು ಹ್ಯಾಂಡ್ ಪೋಸ್ಟನಂತೆ ಸಹಾಯ ಮಾಡಲಿದೆ.
- ಅನುಭವಾತ್ಮಕ ಚಟುವಟಿಕೆಗಳನ್ನು ಒಳಗೊಂಡಿರಲಿ.
- ಏನನ್ನು ಕಲಿಯುವದು ಮತ್ತು ಹೇಗೆ ಕಲಿಯುವದು ಎಂಬುದರ ಸ್ಪಷ್ಟತೆಯಿರಲಿ.
- ಮಕ್ಕಳ ವಿಮರ್ಷಾತ್ಮಕ ಚಿಂತನೆಗೆ ವಿಧಾನಗಳನ್ನು ಸಂಗ್ರಹಿಸುವದು.
- ಚರ್ಚೆಗಳಿಗೆ ಅವಕಾಶ ನೀಡುವದು.
- ಕಲಿಕೆ ಅನುಕೂಲಿಸಲು ಸಾಧನ ಮತ್ತು ತಂತ್ರಗಳನ್ನು ಸಂಗ್ರಹಿಸುವದು.
- ಪ್ರತಿ ಘಟಕಕ್ಕೆ ದೊರೆಯುವ ಅವಧಿಗಳು, ಜ್ಞಾನ ರಚನಾಂಶಗಳು ಮತ್ತು ಮನನಮಾಡಿಕೊಳ್ಳಲೇಬೇಕಾದ ಅಂಶಗಳನ್ನು ಸ್ಪಷ್ಟಪಡಿಸುವದು.

# ಘಟಕ(ಪಾಠ)ಯೋಜನೆ

| **ಘಟಕದ ಹೆಸರು: ಭಾರತಕ್ಕೆ ಯೂರೋಪಿಯನ್ನರ ಆಗಮನ:**<br>ಒಟ್ಟು ಅವಧಿಗಳು: 6<br>ದಿನಾಂಕ: ರಿಂದ ರವರೆಗೆ | **ಬೋಧನೆಯ ಉದ್ದೇಶಗಳು:**<br>* ಭಾರತವು ಯುರೋಪಿಯನ್ನರೊಂದಿಗೆ ಹೊಂದಿದ್ದ ವ್ಯಾಪಾರ * ಭಾರತಕ್ಕೆ ವ್ಯಾಪಾರಕ್ಕಾಗಿ ಬಂದ ಯುರೋಪಿಯನ್ನರು<br>* 1ನೇ,2ನೇ ಮತ್ತು 3ನೇ ಕರ್ನಾಟಿಕೆ ಯುದ್ಧಗಳು * ಪ್ಲಾಸಿ ಕದನ, ದ್ವಿ ಸರ್ಕಾರ ಪದ್ಧತಿ,<br>* ಬ್ರಿಟಿಷರ ಆಕ್ರಮಣ ನೀತಿ |
|---|---|

| ಕ್ರ ಸಂ | ಕಲಿಕಾ ಸಾಮರ್ಥ್ಯಗಳು/ಉಪಘಟಕಗಳು | ಕಲಿಕೆಯನ್ನು ಅನುಕೂಲಿಸುವ ಚಟುವಟಿಕೆಗಳು | ಕಲಿಕೋಪಕರಣಗಳು | ಮೌಲ್ಯಮಾಪನ | | ಶಿಕ್ಷಕರ ಸ್ವ ಅವಲೋಕನ | ದಿನಾಂಕ |
|---|---|---|---|---|---|---|---|
| | | | | ತಂತ್ರ | ಸಾಧನ | | |
| 1 | ಭಾರತ ಮತ್ತು ಯುರೋಪ್ ರಾಷ್ಟ್ರಗಳ ನಡುವಿನ ವಾಣಿಜ್ಯ ಸಂಬಂಧ | ಪು ಚರ್ಚೆ: * ಚರ್ಚೆ: ಭಾರತಕ್ಕೆ ಯೂರೋಪಿಯನ್ನರು ಬರಲು ಪೂರಕ ಅಂಶಗಳು | ಪ್ರಪಂಚ, ಯುರೋಪ್ ಹಾಗೂ ಭಾರತ ನಕಾಶೆ | ಅವಲೋಕನ | ದರ್ಜಾಮಾಪನ | | |
| 2. | ವ್ಯಾಪಾರಕ್ಕಾಗಿ ಯುರೋಪಿಯನ್ನರ ಆಗಮನ<br>ಎ) ಪೋರ್ಚುಗೀಸರ ಏಳಿಗೆ<br>ಬಿ) ಡಚ್ಚರು– ಏಳಿಗೆ ವ್ಯಾಪಾರ ಕೇಂದ್ರಗಳು | ಚಾರ್ಟ್ ತಯಾರಿಕೆ<br>ಯುರೋಪಿಯನ್ನರು –ಸ್ಥಾಪನೆ– ವ್ಯಾಪಾರ ಕೇಂದ್ರಗಳು– ಪ್ರಮುಖರು | ಭಾರತ ನಕಾಶೆ | ಅವಲೋಕನ | ತಪಶೀಲು ಪಟ್ಟಿ | | |
| 3 | ಸಿ) ಬ್ರಿಟಿಷರು– ಏಳಿಗೆ<br>ಡಿ) ಫ್ರೆಂಚರು – ಏಳಿಗೆ | | ಭಾರತ ನಕಾಶೆ ಚಾರ್ಟ್ | ಯೋಜನಾ ಕಾರ್ಯ | ತಪಶೀಲು ಪಟ್ಟಿ | | |
| 4 | 1,2,3ನೇ ಕರ್ನಾಟಿಕ ಕದನಗಳ ಕಾರಣ ಮತ್ತು ಪರಿಣಾಮಗಳು | ಕಾರಣ, ಪರಿಣಾಮಗಳ ಚಾರ್ಟ್ ತಯಾರಿಕೆ, ಚರ್ಚೆ | ಕಾರಣ ಮತ್ತು ಪರಿಣಾಮಗಳ ಚಾರ್ಟ್ | ಯೋಜನಾ ಕಾರ್ಯ | ತಪಶೀಲು ಪಟ್ಟಿ | | |
| 5 | ಪ್ಲಾಸಿ ಕದನ – ಕಾರಣಗಳು ಮತ್ತು ಪರಿಣಾಮಗಳು | ಗುಂಪು ಚರ್ಚೆ: * ಭಾರತದಲ್ಲಿ ಬ್ರಿಟಿಷರು ರಾಜಕೀಯ ಅಸ್ತಿತ್ವ ಸ್ಥಾಪಿಸಲು ಪೂರಕ ಅಂಶಗಳು– ಯೋಜನೆ | | ಪರೀಕ್ಷಣಾ | ಘಟಕ ಪರೀಕ್ಷೆ | | |
| | ಬಕ್ಸಾರ್ ಕದನ – ಕಾರಣಗಳು– ಪರಿಣಾಮಗಳು. ಬಂಗಾಳದಲ್ಲಿ ದ್ವಿಮುಖ ಸರ್ಕಾರ ಜಾರಿಗೆ | ಚಾರ್ಟ್ ತಯಾರಿಕೆ<br>ರಸಪ್ರಶ್ನೆ | | | | | |

## ರೂಪಣಾತ್ಮಕ (ಆಂತರಿಕ) ಮೌಲ್ಯಮಾಪನದ ರೂಪರೇಷಗಳು.

| ಸಮಾಜ ವಿಜ್ಞಾನದಲ್ಲಿ ಆಂತರಿಕ ಅಂಕಗಳು | | | | | | |
|---|---|---|---|---|---|---|
| ಅವಧಿ | ಮೌಲ್ಯ ಮಾಪನ ವಿಧ | ಚಟುವಟಿಕೆಗಳು | | ಸಾಧನ ಪರೀಕ್ಷೆ | ಒಟ್ಟು ಅಂಕ | 20% |
| | | 1 ನೇ ಚ | 2 ನೇ ಚ | | | |
| **SEM-1** | **FA1** | 15 | 15 | 20 | **50** | **5%** |
| | **FA2** | 15 | 15 | 20 | **50** | **5%** |
| **SEM-2** | **FA3** | 15 | 15 | 20 | **50** | **5%** |
| | **FA4** | 15 | 15 | 20 | **50** | **5%** |
| **TOTAL** | | 60 | 60 | 80 | **200** | **20%** |
| ಒಟ್ಟು 200 ಆಂತರಿಕ ಅಂಕಗಳಿಗೆ ವಿದ್ಯಾರ್ಥಿ ಪಡೆದ ಆಂತರಿಕ ಅಂಕಗಳನ್ನು 20% ಕ್ಕೆ ಇಳಿಸಿ ಪರೀಕ್ಷಾ ಮಂಡಳಿಗೆ ಕಳುಹಿಸುವುದು. | | | | | | |

### ಚಟುವಟಿಕೆಗಳನ್ನು ಮೌಲ್ಯಮಾಪನ ಮಾಡುವ ಬಗೆ

1. ಚಟುವಟಿಕೆಗಳು ಪಠ್ಯಕ್ಕೆ ಪುರಕವಾಗಿರಬೇಕು ಮತ್ತು ವಿದ್ಯಾರ್ಥಿಗೆ ಹೋರೆಯಾಗಬಾರದು,
2. ನೀಡುವ ಚಟುವಟಿಗೆ ಸಂಪನ್ಮೂಲ ಸ್ಥಳಿಯವಾಗಿ ಲಭ್ಯವಾಗಬೇಕು.
3. ಹೆಚ್ಚು ವಿದ್ಯಾರ್ಥಿಗಳಿರುವ ತರಗತಿಯಲ್ಲಿ, ವಿದ್ಯಾರ್ಥಿಗಳನ್ನು ಕನಿಷ್ಟ 3 ಗರಿಷ್ಠ 6 ರಂತೆ ಗುಂಪು/ವೈಯಕ್ತಿಕ ಮಾಡಿ ಚಟುವಟಿಕೆ ನಿಡಬಹುದು.
4. ಪ್ರತಿ ಗುಂಪಿಗೂ ಭಿನ್ನ ಚಟುವಟಿಕೆಯನ್ನು ನೀಡಬೇಕು. ಇದರಿಂದ ವಿದ್ಯಾರ್ಥಿಗಳಿಗೆ ಬೇರೆ ಬೇರೆ ವಿಷಯಗಳ ಕುರಿತು ಜ್ಞಾನ ಕಟ್ಟಿಕೊಳ್ಳಲು ಅವಕಾಶ ದೊರೆಯುವದು ಮತ್ತು ಶಿಕ್ಷಕರಿಗೆ ವಿದ್ಯಾರ್ಥಿಗಳ ಸೃಜನಾತ್ಮಕತೆ, ಆಸಕ್ತಿ, ತೊಡಗಿಸಿಕೊಳ್ಳುವಿಕೆಯನ್ನು ಅರಿಯಲುಸಾಧ್ಯವಾಗುತ್ತದೆ.
5. ಉದಾ: 50 ವಿದ್ಯಾರ್ಥಿಗಳ ತರಗತಿ ಇದೆ, ಇಲ್ಲಿ 5 ವಿದ್ಯಾರ್ಥಿಗಳ 10 ಗುಂಪುಮಾಡಿ ಪತ್ರಿ ಗುಂಪಿಗೆ ಒಂದು ಭಿನ್ನ ಚಟುವಟಿಕೆ ನೀಡುವದು. ಅಲ್ಲಿಗೆ ಶಿಕ್ಷಕ 10 ಚಟುವಟಿಕೆಗಳನ್ನು ಸಿದ್ಧಪಡಿಸಿಕೊಂಡು, ಅವುಗಳಿಗೆ ಮಾನಕಗಳನ್ನು ನಿರ್ಧರಿಸಬೇಕು. ಒಂದು ರೂಪಣಾತ್ಮಕ ಮೌಲ್ಯಮಾಪನದಲ್ಲಿ ಶಿಕ್ಷಕ ಒಟ್ಟು 20 ಚಟುವಟಿಕೆಗಳನ್ನು ಸಿದ್ಧಪಡಿಸಿಕೊಳ್ಳಬೇಕು.
6. ನಾಲ್ಕು ರೂ.ಮೌ ಗಳಿಗೆ ಒಟ್ಟು 80 ಚಟುವಟಿಕೆಗಳು ಮತ್ತು ಅವುಗಳಿಗೆ ಮಾನಕಗಳನ್ನು ಸಿದ್ಧಮಾಡಬೇಕು. ಅಲ್ಲಿಗೆ ಪ್ರತಿ ವಿದ್ಯಾರ್ಥಿ 8 ಚಟುವಟಿಕೆಗಳನ್ನು ಮಾಡಿದಂತಾಗುತ್ತದೆ.

| ಅವಧಿ | ಗುಂಪು1 | ಗುಂಪು2 | ಗುಂಪು3 | ಗುಂಪು4 | ಗುಂಪು5 | ಗುಂಪು6 | ಗುಂಪು7 | ಗುಂಪು8 | ಗುಂಪು9 | ಗುಂಪು10 | ಒಟ್ಟು ಚಟುವಟಿಕೆ |
|---|---|---|---|---|---|---|---|---|---|---|---|
| **FA 1** | 2 | 2 | 2 | 2 | 2 | 2 | 2 | 2 | 2 | 2 | **20** |
| **FA 2** | 2 | 2 | 2 | 2 | 2 | 2 | 2 | 2 | 2 | 2 | **20** |
| **FA 3** | 2 | 2 | 2 | 2 | 2 | 2 | 2 | 2 | 2 | 2 | **20** |
| **FA 4** | 2 | 2 | 2 | 2 | 2 | 2 | 2 | 2 | 2 | 2 | **20** |
| **TOTAL** | **8** | **8** | **8** | **8** | **8** | **8** | **8** | **8** | **8** | **8** | **80** |

# ಶಿಕ್ಷಕರ ಚಟುವಟಿಕೆಗಳ ತಪಶೀಲು ವಹಿ – 10ನೇ ತರಗತಿ

ಶಾಲೆಯ ಹೆಸರು:

ತರಗತಿ : 10 ರೂಪನಾತ್ಮಕ ಮೌಲ್ಯಮಾಪನ 1 ( ಜೂನ್ – ಜುಲೈ ) 2014 | ರೂಪನಾತ್ಮಕ ಮೌಲ್ಯಮಾಪನ 2 ( ಅಗಸ್ಟ – ಸೆಪ್ಟಂಬರ್) 2014

ಗುಂಪಿನ ಹೆಸರು :

ಚಟುವಟಿಕೆ ಮತ್ತು ಸಾಧನಾ ( ಪೆನ್ & ಪೇಪರ್)ಪರೀಕ್ಷೆ ಅಂಕ ವಹಿ

| ಕ್ರ ಸಂ | ವಿದ್ಯಾರ್ಥಿ ಹೆಸರು | ಚಟುವಟಿಕೆ ಹೆಸರು | | | | | | | | | | ಸಾಧನಾ ಪರೀಕ್ಷೆ 20 ಅಂಕ | ಒಟ್ಟು | ಚಟುವಟಿಕೆ ಹೆಸರು | | | | | | | | | | ಸಾಧನಾ ಪರೀಕ್ಷೆ 20 ಅಂಕ | ಒಟ್ಟು | ಒಟ್ಟು (ರೂ,ಮೌ 1&2) 100 | 20% |
|---|---|---|---|---|---|---|---|---|---|---|---|---|---|---|---|---|---|---|---|---|---|---|---|---|---|---|---|
| | | ಚಟುವಟಿಕೆ 1 (15ಅಂಕ ) | | | | | ಚಟುವಟಿಕೆ 2 (15ಅಂಕ) | | | | | | | ಚಟುವಟಿಕೆ 1 (15ಅಂಕ ) | | | | | ಚಟುವಟಿಕೆ 2 (15ಅಂಕ) | | | | | | | | |
| | | ಚರ್ಚೆ– ಭಾರತದ ಸವಾಲುಗಳು ಮತ್ತು ಸಮಸ್ಯೆಗಳು | | | | | ನಕಾಶೆ ಬರಯುವದು (ಇತಿಹಾಸ,ಭೂಗೋಳ) | | | | | | | ಪ್ರಭಂದ | | | | | ಯೋಜನೆ | | | | | | | | |
| | | ವಿಷಯ ಬೆಳವಣಿಗೆ | ತಾರ್ಕಿಕ ಚಿಂತನೆ | ಮಂಡನೆ ಶೈಲಿ | ಉಪಸಂಹಾರ | ಒಟ್ಟು | ಕ್ರಿಯಾತ್ಮಕತೆ | ಸ್ಥಳ,ಪ್ರದೇಶ ಗುರುತಿಸುವಿಕೆ | ನಕಾಶೆ ಸ್ವಚ್ಛತೆ | ಕಲಿಕೆ(ಮೌ.ಪ್ರಶ್ನೆ),ಅಲಂಕಾರ | ಒಟ್ಟು | | | ವಿಷಯ ಬೆಳವಣಿಗೆ | ತಾರ್ಕಿಕ ಚಿಂತನೆ | ಮಂಡನೆ ಶೈಲಿ | ಉಪಸಂಹಾರ | ಒಟ್ಟು | ಪರಿಕಲ್ಪನೆ ಅರ್ಥೈಸಿಕೊಳ್ಳುವಿಕೆ | ಸೌಂದರ್ಯೋಪಾಸನಯ ಕೌಶಲಗಳು | ದತ್ತಾಂಶಗಳ ಸಂಗ್ರಹ | ಸ್ವಂತಿಕಯೆ ವಿಚಾರಗಳು | ಒಟ್ಟು | | | | |
| | ಅಂಕಗಳು | 4 | 4 | 4 | 3 | 15 | 4 | 4 | 4 | 3 | 15 | 20 | 50 | 4 | 4 | 4 | 3 | 15 | 4 | 4 | 4 | 3 | 15 | 20 | 50 | 100 | |
| 1 | ಅಶ್ವಿನಿ ಚನ್ನಾಪುರ | 4 | 3 | 3 | 2 | **12** | 2 | 4 | 4 | 2 | **12** | 15 | **39** | | | | | | | | | | | | | | |
| 2 | ಯಲ್ಲಪ್ಪ ಕಾಮನಹಳ್ಳಿ | 3 | 4 | 4 | 2 | **13** | 4 | 4 | 3 | 3 | **14** | 18 | **45** | | | | | | | | | | | | | | |
| 3 | | | | | | **0** | | | | | **0** | | **0** | | | | | | | | | | | | | | |
| 4 | | | | | | | | | | | | | | | | | | | | | | | | | | | |
| 5 | | | | | | | | | | | | | | | | | | | | | | | | | | | |

## ಮಾದರಿ ಚಟುವಟಿಕೆಳು ಮತ್ತು ಮಾನಕಗಳು – 10ನೇ ತರಗತಿ

| ರೂ.ಮೌ ಮತ್ತು ತಿಂಗಳು | ಘಟಕಗಳು | ಚಟುವಟಿಕೆ/ಯೋಜನೆಗಳು | ಮೌಲ್ಯನಿರ್ಧಾರಕ ಅಂಶಗಳು | ಅಂಕ ಗಳು | ಒಟ್ಟು ಅಂಕ ಗಳು |
|---|---|---|---|---|---|
| | ಇತಿಹಾಸ | | | | |
| | 1. ಭಾರತಕ್ಕೆ ಯುರೋಪಿಯನ್ನರ ಆಗಮನ | **1. ವರದಿ ಸಿದ್ಧಪಡಿಸುವದು:**<br>**ವಿಷಯ: "ವೈಜ್ಞಾನಿಕ ಬೆಳವಣಿಗೆಯು ಪ್ರಪಂಚದಲ್ಲಿ ಬದಲಾವಣೆ ತಂದಿತು"**<br><br>**ತಂತ್ರ: ಯೋಜನೆ**<br>**ಸಾಧನ: ತಪಶೀಲು ಪಟ್ಟಿ** | 1. ವರದಿಯ ಪರಿಕಲ್ಪನೆ ಅರ್ಥೈಸಿಕೊಂಡಿರುವನು.<br>2. ಅಂತರಜಾಲ/ಗ್ರಂಥಾಲಯದ ಬಳಕೆಯಾಗಿದೆ.<br>3. ಪ್ರಮುಖ ವೈಜ್ಞಾನಿಕ ಬೆಳವಣಿಗೆಯ ಅಂಶಗಳನ್ನು ಪಟ್ಟಿ ಮಾಡಿರುವರು.<br>4. ಸಂಬಂಧಿಸಿದ ಚಿತ್ರಪಟಗಳ ಸಂಗ್ರಹವಾಗಿದೆ.<br>5. ವಿಷಯ ಮಂಡನೆ ಉತ್ತಮವಾಗಿದೆ. | **2**<br>**3**<br>**3**<br><br>**4**<br>**3** | **15** |
| | | **2. ನಕಾಶೆಯಲ್ಲಿ ಗುರುತಿಸುವದು:**<br>**ವಿಷಯ: ಪ್ರಪಂಚದ ನಕಾಶೆಯಲ್ಲಿ ಜಲಮಾರ್ಗಗಳನ್ನು ಗುರುತಿಸಿ.**<br><br>**ತಂತ್ರ: ಯೋಜನೆ**<br>**ಸಾಧನ: ತಪಶೀಲು ಪಟ್ಟಿ** | 1. ನಕಾಶೆ ರಚನೆಯಲ್ಲಿ ಸ್ಪಷ್ಟತೆಯಿದೆ.<br>2. ಸ್ಥಳ,ಪ್ರದೇಶಗಳ ಗುರುತಿಸುವಿಕೆ ಸರಿಯಾಗಿದೆ.<br>3. ಕ್ರಿಯಾತ್ಮಕತೆ ಕಂಡುಬರುತ್ತದೆ.<br>4. ನಕಶೆಯಲ್ಲಿ ಅಲಂಕಾರಿಕ ಅಂಶಗಳು ಕಂಡುಬರುತ್ತವೆ.<br>5. ವಿಷಯ ಮಂಡನೆ ಉತ್ತಮವಾಗಿದೆ. | **2**<br>**4**<br>**3**<br><br>**3**<br>**3** | **15** |
| | 2. ಕರ್ನಾಟಕ ಏಕೀಕರಣ ಮತ್ತು ಗಡಿ ಪ್ರದೇಶಗಳು | **1. ವರದಿ ಸಿದ್ಧಪಡಿಸುವದು:**<br>**ವಿಷಯ: ಹೈದರಾಬಾದ್ ಕರ್ನಾಟಕ್ಕೆ ನೀಡಿದ ವಿಶೇಷ ಸ್ಥಾನಮಾನ ಬಗ್ಗೆ ಮಾಹಿತಿ ಸಂಗ್ರಹ.**<br><br>**ತಂತ್ರ: ಯೋಜನೆ**<br>**ಸಾಧನ: ತಪಶೀಲು ಪಟ್ಟಿ** | 1. ವರದಿಯ ಪರಿಕಲ್ಪನೆ ಅರ್ಥೈಸಿಕೊಂಡಿರುವನು.<br>2. ಅಂತರಜಾಲ/ಗ್ರಂಥಾಲಯ/ಪತ್ರಿಕೆಗಳ ಬಳಕೆಯಾಗಿದೆ.<br>3. ಹೈದರಾಬಾದ್ ಕರ್ನಾಟದ ಹಿನ್ನಲೆ ವರದಿಯಾಗಿದೆ.<br>4. ಕರ್ನಾಟಕದ ನಕಾಶೆಯಲ್ಲಿ ಹೈ.ಕ ಗುರುತಿಸಿರುವನು.<br>**5.** ವಿಷಯ ಮಂಡನೆ ಉತ್ತಮವಾಗಿದೆ. | **2**<br>**4**<br><br>**4**<br>**2**<br>**3** | **15** |
| | | **2. ನಕಾಶೆ ಬರೆಯುವದು:**<br>**ವಿಷಯ: ಭಾರತದ ಅಂದವಾದ ನಕಾಶೆ ಬರೆದು ಸ್ವತಂತ್ರಪೂರ್ವದ ಕನ್ನಡ ಮಾತನಾಡುವ ಪ್ರದೇಶಗಳನ್ನು ಗುರುತಿಸಿ ಮತ್ತು ಸಂಕ್ಷಿಪ್ತ ಮಾಹಿತಿ ಸಂಗ್ರಹಿಸಿ.**<br><br>**ತಂತ್ರ: ಯೋಜನೆ**<br>**ಸಾಧನ: ತಪಶೀಲು ಪಟ್ಟಿ** | 1. ನಕಾಶೆ ರಚನೆಯಲ್ಲಿ ಸ್ಪಷ್ಟತೆಯಿದೆ.<br>2. ಸ್ಥಳ,ಪ್ರದೇಶಗಳ ಗುರುತಿಸುವಿಕೆ ಸರಿಯಾಗಿದೆ.<br>3. ಕ್ರಿಯಾತ್ಮಕತೆ ಕಂಡುಬರುತ್ತದೆ.<br>4. ನಕಶೆಯಲ್ಲಿ ಅಲಂಕಾರಿಕ ಅಂಶಗಳು ಕಂಡುಬರುತ್ತವೆ.<br>**5.** ವಿಷಯ ಮಂಡನೆ ಉತ್ತಮವಾಗಿದೆ. | **4**<br>**3**<br><br>**3**<br>**3**<br>**2** | **15** |
| | **3. ಮೌಖಿಕ ಚರಿತ್ರೆ.** | **1. ಯೋಜನಾ ಕಾರ್ಯ:**<br>**ವಿಷಯ: ಇತಿಹಾಸ ರಚನೆಗೆ ಪೂರಕವಾಗುವ ಜಾನಪದ,ಲಾವಣಿಪದ ಹಾಗೂ ಕಥೆಗಳ ಸಂಗ್ರಹ.**<br><br>**ತಂತ್ರ: ಯೋಜನೆ**<br>**ಸಾಧನ: ತಪಶೀಲು ಪಟ್ಟಿ.** | **1. ಯೋಜನೆಗೆ ಸಂಬಂಧಪಟ್ಟ ಜ್ಞಾನವಿದೆ.**<br>**2. ಸೌಂದರ್ಯೋಪಾಸನೆಯ ಕೌಶಲಗಳನ್ನು ಪ್ರತಿಬಿಂಬಿಸಿವೆ.**<br>**3. ಯೋಜನೆಯ ಪರಿಕಲ್ಪನೆ ಅರ್ಥೈಸಿಕೊಂಡಿರುವನು.**<br>**4. ವಿಷಯಕ್ಕೆ ಸಂಬಂಧಿಸಿದ ದತ್ತಾಂಶಗಳನ್ನು ಸಂಗ್ರಹಿಸಿರುವನು.**<br>**5 ಯೋಜನೆಗೆ ಪೂರಕವಾದ ವಿಷಯವನ್ನು ಸಂಗ್ರಹಿಸಿರುವನು.** | **2**<br>**3**<br><br>**2**<br>**4**<br>**4** | **15** |

# ಕೈಗೊಳ್ಳಬಹುದಾದ ಪ್ರಮುಖ ಚಟುವಟಿಕೆಗಳು

| FA | ಘಟಕಗಳು | ಕೈಗೊಳ್ಳಬಹುದಾದ ಚಟುವಟಿಕೆಗಳು | ಮೌಲ್ಯ ಮಾಪನ | ಅಂಕ ಗಳು |
|---|---|---|---|---|
| 1 – ರಚನಾತ್ಮಕ | **ಇತಿಹಾಸ**<br>1) ಭಾರತಕ್ಕೆ ಯುರೋಪಿಯನ್ನರ ಆಗಮನ<br>2) ವಸಾಹತು ಆಳ್ವಿಕೆಯಲ್ಲಿ ಕನ್ನಡ ಮಾತನಾಡುವ ಪ್ರದೇಶಗಳು<br>3) ಮೌಖಿಕ ಚರಿತ್ರೆ.<br>4) ಬ್ರಿಟಿಷ್ ಆಡಳಿತ ಬುನಾದಿ ಹಾಗು ಅದರ ಪರಿಣಾಮಗಳು<br>**ರಾಜ್ಯಶಾಸ್ತ್ರ**<br>1. ಭಾರತದ ಸಮಸ್ಯೆಗಳು ಹಾಗೂ ಅವುಗಳ ಪರಿಹಾರೋಪಾಯಗಳು<br>**ಸಮಾಜ ಶಾಸ್ತ್ರ**<br>1. ಸಾಮಾಜಿಕ ಸ್ತರ ವ್ಯವಸ್ಥೆ<br>**ಭೂಗೋಳ ಶಾಸ್ತ್ರ**<br>1. ಭಾರತ ನಮ್ಮ ಮಾತೃಭೂಮಿ<br>2. ಭಾರತದ ಪ್ರಾಕೃತಿಕ ಲಕ್ಷಣಗಳು<br>3. ಭಾರತದ ಮಾನ್ಸೂನ್ ವಾಯುಗುಣದ ಋತುಮಾನಗಳು ಮತ್ತು ಲಕ್ಷಣಗಳು<br>4. ಭಾರತದ ಮಣ್ಣುಗಳು<br>5. ಭಾರತದ ಅರಣ್ಯಗಳು<br>**ಅರ್ಥಶಾಸ್ತ್ರ**<br>1. ಅಭಿವೃದ್ಧಿ<br>**ವ್ಯವಹಾರ ಅಧ್ಯಯನ**<br>1. ಬ್ಯಾಂಕ್ ವ್ಯವಹಾರಗಳು | 1. "ವೈಜ್ಞಾನಿಕ ಬೆಳವಣಿಗೆಯು ಪ್ರಪಂಚದಲ್ಲಿ ಬದಲಾವಣೆ ತಂದಿತು" ಚರ್ಚೆ<br>2. ಪ್ರಪಂಚದ ನಕಾಶೆಯಲ್ಲಿ ಜಲಮಾರ್ಗಗಳನ್ನು ಗುರುತಿಸಿ.<br>3. ಹೈದರಾಬಾದ್ ಕರ್ನಾಟಕ್ಕೆ ನೀಡಿದ ವಿಶೇಷ ಸ್ಥಾನಮಾನ ಬಗ್ಗೆ ಮಾಹಿತಿ ಸಂಗ್ರಹ.<br>1. ಭಾರತದ ಅಂದವಾದ ನಕಾಶೆ ಬರೆದು ಸ್ವತಂತ್ರಪೂರ್ವದ ಕನ್ನಡ ಮಾತನಾಡುವ ಪ್ರದೇಶಗಳನ್ನು ಗುರುತಿಸಿ ಮತ್ತು ಸಂಕ್ಷಿಪ್ತ ಮಾಹಿತಿ ಸಂಗ್ರಹಿಸಿ.<br>2. ಲಾವಣಿ, ಜನಪದ ಗೀತೆಗಳ ಸಂಗ್ರಹ<br>**3. ನಿಮ್ಮ ಊರಿಗೆ ಆ ಹೆಸರು ಬರಲು ಕಾರಣವನ್ನು ನಮ್ಮೂರಿನ ಹಿರಿಯರನ್ನು ಭೇಟಿಮಾಡಿ ಮಾಹಿತಿ ಸಂಗ್ರಹಿಸಿ.**<br>**4. "1935ರ ಭಾರತ ಸರ್ಕಾರದ ಕಾಯಿದೆಯು ನಮ್ಮ ಸಂವಿಧಾನ ರಚನೆಯ ಮೂಲ"**<br>5. ಆಂಗ್ಲೋ–ಮರಾಠಾ ಯುದ್ಧಗಳ ಕಾರಣ ಮತ್ತು ಪರಿಣಾಮಗಳನ್ನು ಪಟ್ಟಿ ಮಾಡುವದು.<br>9. ಚರ್ಚೆ: 1. "ಭ್ರಷ್ಟಾಚಾರ ಒಂದು ಸಾಮಾಜಿಕ ಪಿಡುಗು"<br>2. "ಮಹಿಳೆಯರ ಸ್ಥಿತಿ–ಗತಿ ಸುಧಾರಣೆಯ ಅಗತ್ಯತೆ ಮತ್ತು ಸುಧಾರಣ ಕ್ರಮಗಳು"<br>3. "ದೇಶದ ಅಭಿವೃದ್ಧಿಗೆ ಜನಸಂಖ್ಯೆಯು ಪೂರಕವೂ ಹೌದು ಮಾರಕವೂ ಹೌದು"<br>10. ಭಾರತದಲ್ಲಿ ಹೆಸರುವಾಸಿಯಾದ ಮಹಿಳೆಯರ ಚಿತ್ರಪಟಗಳನ್ನು ಸಂಗ್ರಹಿಸಿ ವರದಿ ಮಾಡಿ.<br>11. ಬಡತನ ಮತ್ತು ನಿರುದ್ಯೋಗ ಹೋಗಲಾಡಿಸಲು ಸರಕಾರ ಕೈಗೊಂಡ ಕ್ರಮಗಳನ್ನು ಪಟ್ಟಿ ಮಾಡಿ.<br>12. ಅಸ್ಪೃಶ್ಯತೆ ಹೋಗಲಾಡಿಸಲು ಸರಕಾರ ಕೈಗೊಂಡ ಕ್ರಮಗಳನ್ನು ಪಟ್ಟಿ ಮಾಡಿ.<br>13. ಭಾರತದ ಅಂದವಾದ ನಕಾಶೆ ಬರೆದು–<br>– ಪ್ರಾಕೃತಿಕ ಲಕ್ಷಣಗಳು.<br>– ಮಣ್ಣುಗಳ ಹಂಚಿಕೆ<br>– ಅರಣ್ಯಗಳ ಹಂಚಿಕೆ<br>– ಮಳೆಯ ಹಂಚಿಕೆ ಗುರಿತಿಸುವದು.<br>(ಪ್ರತಿ ಅಂಶಕ್ಕೂ ಬೇರೆ ನಕಾಶೆ ಬರೆಯುವದು)<br>14. ಇತ್ತೀಚಿನ ಮಾನವ ಅಭಿವೃದ್ಧಿ ಸೂಚಿಯ ಅಂಕಿ ಅಂಶಗಳನ್ನು ಸಂಗ್ರಹಿಸಿ ವಿಶ್ಲೇಷಿಸಿ.<br>15. ವಿವಿಧ ಬ್ಯಾಂಕುಗಳನ್ನು ಪಟ್ಟಿ ಮಾಡಿ ಅವುಗಳ ವಿಶೇಷ ಮಾಹಿತಿಯನ್ನು ಸಂಗ್ರಹಿಸಿ.<br>16. ಅಂಚೆ ಚೀಟಿಗಳು ದಿನಪತ್ರಿಕೆಗಳು ಮತ್ತು ಛಾಯಾ ಚಿತ್ರಗಳು<br>5) ವಿವಿಧ ಮಣ್ಣಿನ ಮಾದರಿಗಳ ಸಂಗ್ರಹಣೆ<br>6) ಬ್ಯಾಂಕ್ ಖಾತೆ ತೆರೆಯುವುದರ ಬಗ್ಗೆ ಮಾಹಿತಿ ಸಂಗ್ರಹಿಸಿ. | ಯಾವುದಾದರೂ ಎರಡು ಚಟುವಟಿಕೆಗಳು ಮತ್ತು 20 ಅಂಕಗಳಿಗೆ ಒಂದು ಸಾಧನ ಪರೀಕ್ಷೆ | 15+15+20=50 |

| FA | ಘಟಕಗಳು | ಚಟುವಟಿಕೆಗಳು | ಮೌಲ್ಯ ಮಾಪನ | ಅಂಕ ಗಳು |
|---|---|---|---|---|
| 2 – ಅಗಸ್ಟ್ ಮತ್ತು ಸೆಪ್ಟೆಂಬರ್ | **ಇತಿಹಾಸ**<br>5. ಸಾಮಾಜಿಕ ಮತ್ತು ಧಾರ್ಮಿಕ ಸುಧಾರಣೆಗಳು<br><br>6. ಭಾರತದ ಪ್ರಥಮ ಸ್ವಾತಂತ್ರ್ಯ ಸಂಗ್ರಾಮ<br><br>**ರಾಜ್ಯಶಾಸ್ತ್ರ**<br>2.ಭಾರತದ ವಿದೇಶಾಂಗ ನೀತಿ<br><br>**ಸಮಾಜ ಶಾಸ್ತ್ರ**<br>2.ದುಡಿಮೆ ಮತ್ತು ಆರ್ಥಿಕ ಜೀವನ<br><br>3.ಸಾಮಾಜಿಕ ವರ್ತನೆ ಮತ್ತು ಪ್ರತಿಭಟನೆಗಳು<br><br>**ಭೂಗೋಳ ಶಾಸ್ತ್ರ**<br>6. ಜಲಸಂಪನ್ಮೂಲಗಳು<br><br>6. ಭಾರತದ ಭೂಬಳಕೆ ಮತ್ತು ವ್ಯವಸಾಯ<br><br>8.ಖನಿಜ ಸಂಪನ್ಮೂಲಗಳು<br><br>**ಅರ್ಥಶಾಸ್ತ್ರ**<br>2.ಅರ್ಥವ್ಯವಸ್ಥೆ ಮತ್ತು ಸರಕಾರ<br><br>**ವ್ಯವಹಾರ ಅಧ್ಯಯನ**<br>2.ವಿಮೆ | 1) ಬಾಲ್ಯವಿವಾಹ ನಿರ್ಮೂಲನೆಗಾಗಿ ಸರಕಾರದ ಕ್ರಮಗಳನ್ನು ಪಟ್ಟಿಮಾಡುವದು.<br>2) ಮಹಿಳೆಯರ ಶಿಕ್ಷಣಕ್ಕಾಗಿ ಸರಕಾರದ ಕ್ರಮಗಳು ಪಟ್ಟಿಮಾಡುವದು.<br>3) ಸಮಾಜ ಸುಧಾರಕರ ಛಾಯಾಚಿತ್ರಗಳ ಸಂಗ್ರಹಣೆ ಮಾಡಿ ಸಂಕ್ಷಿಪ್ತ ಮಾಹಿತಿ ಸಂಗ್ರಹಿಸುವದು.<br>4) ಭಾರತದ ನಕಾಶೆಯಲ್ಲಿ ಬ್ರಿಟಿಷರು ದತ್ತು ಮಕ್ಕಳಿಗೆ ಹಕ್ಕಿಲ್ಲ ಎಂಬ ನೀತಿಯಿಂದ ವಶಪಡಿಸಿಕೊಂಡ ಪ್ರದೇಶಗಳ ಗುರುತಿಸುವಿಕೆ.<br>5) "ಸ್ವತಂತ್ರ ಪೂರ್ವ ಭಾರತದಲ್ಲಿನ ಸಾಮಾಜೀಕ ಪಿಡುಗುಗಳು ಮತ್ತು ಅವುಗಳ ನಿವಾರಣೆಗಾಗಿ ನಡೆದ ಹೋರಾಟಗಳು" ಚರ್ಚಾಸ್ಪರ್ಧೆ.<br>6) 1857ರ ಪ್ರಮುಖ ದಂಗೆಗಳ ಕುರಿತು ಒಂದು ವರದಿ ತಯಾರಿಸಿ.<br>7) ವೃತ್ತಪತ್ರಿಕೆಯಲ್ಲಿ ಬರುವ ವಿದೇಶಾಂಗ ನೀತಿಗೆ ಸಂಬಂದಿಸಿದ ಮಾಹಿತಿ ಸಂಗ್ರಹಿಸಿ.<br>8) 'ಭಾರತವು ಅಲಿಪ್ತ ನೀತಿಯನ್ನು ಅಳವಡಸಿಕೊಂಡಿರುವದು ದೇಶದ ಅಭಿವರದ್ಧಿಗೆ ಸಹಕಾರಿ" ಚರ್ಚೆ.<br>9) ನಿಮ್ಮ ಸುತ್ತಮುತ್ತಲಿನ ಪ್ರದೇಶಗಳಲ್ಲಿನ ಸಂಘಟಿತ ಮತ್ತು ಅಸಂಘಟಿತ ಕೆಲಸಗಾರರನ್ನು ಪಟ್ಟಿಮಾಡಿ.<br>10) ಸಂಘಟಿತ ಮತ್ತು ಅಸಂಘಟಿತ ಕೆಲಸಗಾರರ ಸಂಕ್ಷಿಪ್ತ ಮಾಹಿತಿಯೊಂದಿಗೆ ಒಂದು ಆಲ್ಬಂ ತಯಾರಿಸಿ.<br>11) ನಿಮ್ಮೂರಿನ ಸ್ತ್ರೀ ಸಂಘಗಳನ್ನು ಪಟ್ಟಿಮಾಡಿ ಮತ್ತು ಅವುಗಳಿಗೆ ಭೇಟಿಮಾಡಿ ಅವುಗಳ ಉದ್ದೇಶಗಳನ್ನು ತಿಳಿಯಿರಿ.<br>12) ಕರ್ನಾಟಕದಲ್ಲಿ ನಡೆಯುತ್ತಿರುವ ಪರಿಸರ ಸಂರಕ್ಷಣಾ ಚಳುವಳಿಗಳ ಕುರಿತು ಒಂದು ವರದಿ ತಯಾರಿಸಿ.<br>13) ನಿಮ್ಮ ಪ್ರದೇಶದ ಸುತ್ತಮುತ್ತ ಕಂಡುಬರುವ ಕೆರೆಗಳನ್ನು ಪಟ್ಟಿ ಮಾಡಿ ಅವುಗಳ ವಿಶೇಷ ತಿಳಿಸಿ.<br>14) ಭಾರತದ ಪ್ರಮುಖ ವಿವಿಧೋದ್ದೇಶ ನದಿ ಕಣಿವೆ ಯೋಜನೆಗಳನ್ನು ಪಟ್ಟಿ ಮಾಡಿ ವರದಿ ತಯಾರಿಸಿ.<br>15) ಭಾರತದ ಅಂದವಾದ ನಕಾಶೆ ಬರೆದು ಪ್ರಮುಖ ಆಣೆಕಟ್ಟುಗಳನ್ನು ಗುರುತಿಸಿ.<br>16) ನಿಮ್ಮ ಪ್ರದೇಶದ ಸುತ್ತಮುತ್ತ ಬೆಳೆಯುವ ಬೆಳಗಳನ್ನು ಪಟ್ಟಿ ಮಾಡಿ ಮತ್ತು ಚಿತ್ರಗಳೊಂದಿಗೆ ಮಾಹಿತಿ ಸಂಗ್ರಹಿಸಿ.<br>17) ಕಾರ್ಮಿಕರ ಸಂಘಟನೆಗಳ ಸಂಸ್ಥೆಗಳಿಗೆ ಭೇಟಿ, ಪಟ್ಟಿ ಮಾಡುವುದು<br>18) ವಿವಿಧ ರೀತಿಯ ಜಲಸಂಪನ್ಮೂಲಗಳ ಬಳಕೆಯ ಚರ್ಚೆ<br>19) ಭಾರತದಲ್ಲಿ ದೊರೆಯುವ ಖನಿಜಗಳ ಮಾದರಿ ಸಂಗ್ರಹಿಸಿ.<br>20) ಭಾರತದ ನಕಾಶೆಯಲ್ಲಿ ಖನಿಜಗಳ ಹಂಚಿಕೆ ಗುರುತಿಸಿ.<br>21) ಇವರೆಗಿನ ಪಂಚವಾರ್ಷಿಕ ಯೋಜನೆಗಳ ಅಂಕಿ ಅಂಶಗಳನ್ನು ಸಂಗ್ರಹಿಸಿ.<br>22) ವಿವಿಧ ವಿಮೆಗಳ ಬಗ್ಗೆ ಮಾಹಿತಿ ಸಂಗ್ರಹಣೆ | ಯಾವುದಾದರೂ ಎರಡು ಚಟುವಟಿಕೆಗಳು ಮತ್ತು 20 ಅಂಕಗಳಿಗೆ ಒಂದು ಸಾಧನಾ ಪರೀಕ್ಷೆ | 15+15+20=50 |

| FA | ಘಟಕಗಳು | ಬೋಧನೋಪಕರಣ ಚಟುವಟಿಕೆಗಳು | ಮೌಲ್ಯ ಮಾಪನ | ಅಂಕಗಳು |
|---|---|---|---|---|
| 3ನವೆಂಬರ್<br>ಮತ್ತು<br>ಡಿಸೆಂಬರ್ | **ಇತಿಹಾಸ**<br>7. ಭಾರತದಲ್ಲಿ ಬ್ರಿಟಿಷ್ ಆಡಳಿತದ ಪರಿಣಾಮಗಳು<br>8. ಸ್ವಾತಂತ್ರ್ಯ ಹೋರಾಟ<br>**ರಾಜ್ಯಶಾಸ್ತ್ರ**<br>3.ಅನ್ಯ ರಾಷ್ಟ್ರಗಳೊಂದಿಗೆ ಭಾರತದ ಸಂಬಂಧ<br>**ಸಮಾಜ ಶಾಸ್ತ್ರ**<br>**3.**ಸಾಮಾಜಿಕ ವರ್ತನೆ ಮತ್ತು ಪ್ರತಿಭಟನೆಗಳು (ಮುಂದುವರೆದಿದೆ)<br>**ಭೂಗೋಳ ಶಾಸ್ತ್ರ**<br>9.ಭಾರತದ ಸಾರಿಗೆ<br>10.ಭಾರತದ ಪ್ರಮುಖ ಕೈಗಾರಿಕೋದ್ಯಮಗಳು<br>11.ಸಂಪರ್ಕ<br>**ಅರ್ಥಶಾಸ್ತ್ರ**<br>3.ಗ್ರಾಮೀಣ ಅಭಿವೃದ್ಧಿ<br>**ವ್ಯವಹಾರ ಅಧ್ಯಯನ** | 1) ಸ್ವಾತಂತ್ರ್ಯ ಹೋರಾಟಗಾರರ ಬಗ್ಗೆ<br>ವಿವಿಧ ರೀತಿಯ ಚಟುವಟಿಕೆಗಳು<br>2) ಇತರೆ ರಾಷ್ಟ್ರಗಳೊಂದಿಗೆ ಭಾರತದ<br>ಸಂಬಂಧ<br>3) ಸ್ತ್ರೀಶಕ್ತಿ ಸಂಘಗಳಿಗೆ ಭೇಟಿ ಮಾಡುವುದು.<br>4) ಯಾವುದಾದರೊಂದು ಕೈಗಾರಿಕೆಗೆ<br>ಭೇಟಿ<br>5) ಉದ್ಯಮಗಳ ಸಂದರ್ಶನ<br>6) ನಾಟಕ | ಯಾವುದಾದರೂ ಎರಡು ಚಟುವಟಿಕೆಗಳು ಮತ್ತು 20 ಅಂಕಗಳಿಗೆ ಒಂದು ಸಾಧನಾ ಪರೀಕ್ಷೆ | 15+15+20=50 |

## ಸಾಧನಾ ಪರೀಕ್ಷೆಯ ಸ್ವರೂಪ – 20 ಅಂಕಗಳಿಗಾಗಿ

| FA | ಘಟಕಗಳು | ಬೋಧನೋಪಕರಣ ಚಟುವಟಿಕೆಗಳು | ಮೌಲ್ಯ ಮಾಪನ | ಅಂಕಗಳು |
|---|---|---|---|---|
| 4<br>ಜನವರಿ<br>ಮತ್ತು<br>ಫೆಬ್ರವರಿ | **ಇತಿಹಾಸ**<br>9. ಸ್ವಾತಂತ್ರೋತ್ತರ ಭಾರತ<br>10. 20ನೇ ಶತಮಾನದ ರಾಜಕೀಯ ಆಯಾಮಗಳು<br>**ರಾಜ್ಯಶಾಸ್ತ್ರ**<br>4. ಜಾಗತಿಕ ಸಮಸ್ಯೆಗಳು ಹಾಗೂ ಭಾರತದ ಪಾತ್ರ<br>5. ಜಾಗತಿಕ ಸಂಸ್ಥೆಗಳು<br>**ಸಮಾಜ ಶಾಸ್ತ್ರ**<br>4. ಸಾಮಾಜಿಕ ಸಮಸ್ಯೆಗಳು<br>**ಭೂಗೋಳ ಶಾಸ್ತ್ರ**<br>**12.**ನೈಸರ್ಗಿಕ ವಿನಾಶಕಾರಕಗಳು<br>13.ಭಾರತದ ಜನಸಂಖ್ಯೆ<br>**ಅರ್ಥಶಾಸ್ತ್ರ**<br>4.ಸಾರ್ವಜನಿಕ ಹಣಕಾಸು ಮತ್ತು ಆಯವ್ಯಯ<br>**ವ್ಯವಹಾರ ಅಧ್ಯಯನ**<br>4.ವ್ಯವಹಾರದ ಜಾಗತೀಕರಣ | 1) ಸಾಂಸ್ಕೃತಿಕ ದಿನೋತ್ಸವ<br>2) ಅಣಕು ಸಾಮಾನ್ಯ ಸಭೆ<br>3) ಮಾರಕಗಳ ಚಿತ್ರ ಸಂಗ್ರಹಣೆ<br>4) ನೈಸರ್ಗಿಕ ವಿಕಾರೋಪಗಳ ಬಗ್ಗೆಚರ್ಚೆ<br>5) ರಸಪ್ರಶ್ನೆ | ಯಾವುದಾದರೂ ಎರಡು ಚಟುವಟಿಕೆಗಳು ಮತ್ತು 20 ಅಂಕಗಳಿಗೆ ಒಂದು ಸಾಧನಾ ಪರೀಕ್ಷೆ | 15+15+20=50 |

## 1 ನೇ ರೂಪನಾತ್ಮಕ ಪರೀಕ್ಷೆ 2014–15

## Types of questions

| Sl.No | Type | Marks |
|---|---|---|
| 1 | Multiple choice | 1*3=3 |
| 2 | Very short answer | 1*2=2 |
| 3 | Short answer | 2*4=8 |
| 4 | Long answer 1 | 3*1=3 |
| 5 | Map | 1+3=4 |

### ಅಧ್ಯಾಯವಾರು ಹಂಚಿಕೆ

| ಅ. ನಂ | ಪಾಠದ ಹೆಸರು | MCQ | V.S.A | S.A | L.A.1 | MAP | T.Q | MARKS | |
|---|---|---|---|---|---|---|---|---|---|
| 1 | ಭಾರತಕ್ಕೆ ಯುರೋಪಿಯನ್ನರ ಆಗಮನ | | | | 1 | | 1 | 3 | |
| 2 | ವ.ಆ.ಕನ್ನಡ ಮಾತನಾಡುವ ಪ್ರದೇಶಗಳು | 1 | | | | | 1 | 1 | |
| 3 | ಜನಪದ ಚರಿತ್ರೆ | | 1 | | | | 1 | 1 | |
| 4 | ಬ್ರಿಟಿಷ ಆಡಳಿತದ ಬುನಾದಿ/ಪರಿಣಾಮ | | | 1 | | | 1 | 2 | |
| 5 | ಭಾರತದ ಸಮಸ್ಯೆಗಳು ಪರಿಹಾರೋಪಾಯಗಳು | | | 1 | | | 1 | 2 | |
| 6 | ಸಾಮಾಜಿಕ ಸ್ಥರ ವಿನ್ಯಾಸ | 1 | 1 | | | | 2 | 2 | |
| 7 | ಭಾರತ ನಮ್ಮ ಮಾತೃ ಭೂಮಿ | 1 | | | | | 1 | 1 | |
| 8 | ಭಾರತದ ಪ್ರಾಕೃತಿಕ ಲಕ್ಷಣಗಳು | | | | | 1* | 1 | 4 | |
| 9 | ಭಾರತದ ಮಾನ್ಸೂನ್ ವಾಯುಗುಣ | | | | | 1* | 1 | | |
| 10 | ಭಾರತದ ಮಣ್ಣುಗಳು | | | | | 1* | 1 | | |
| 11 | ಭಾರತದ ಅರಣ್ಯಗಳು | | | | | 1* | 1 | | |
| 12 | ಅಭಿವೃದ್ಧಿ | | | 1 | | | 1 | 2 | |
| 13 | ಬ್ಯಾಂಕ ವ್ಯವಹಾರಗಳು | | | 1 | | | 1 | 2 | |
| | ಒಟ್ಟು | 03 | 02 | 04 | 01 | 01 | 11 | 20 | |

ಸೂಚನೆ; * ನಕಾಶೆಗೆ ಸಂಬಂಧಿಸಿದ ಪ್ರಶ್ನೆ

### ವಿಭಾಗವಾರು ಹಂಚಿಕೆ

| ವಿಷಯ | MCQ | V.S.A | S.A | L.A. 1 | L.A 2 | MAP | T.QUESTIONS | T.MARKS |
|---|---|---|---|---|---|---|---|---|
| ಇತಿಹಾಸ | 1 | 1 | 1 | 1 | | | 4 | 7 |
| ರಾಜ್ಯಶಾಸ್ತ್ರ | | | 1 | | | | 1 | 2 |
| ಸಮಾಜಶಾಸ್ತ್ರ | 1 | 1 | | | | | 2 | 2 |
| ಭೂಗೋಳ | 1 | | | | | 4 | 2 | 5 |
| ಅರ್ಥಶಾಸ್ತ್ರ | | | 1 | | | | 1 | 2 |
| ವ್ಯ.ಅಧ್ಯಯನ | | | 1 | | | | 1 | 2 |
| ಒಟ್ಟು | | | | | | | 11 | 20 |

ರೂಪನಾತ್ಮಕ ಪರೀಕ್ಷೆ 1 – ಸಾಧನಾ ಪರೀಕ್ಷೆ

**ವರ್ಗ :– 10 ವಿಷಯ :– ಸಮಾಜ ವಿಜ್ಞಾನ ದಿನಾಂಕ:–31–07–2014 ಅಂಕ :20**

---

**ಪ್ರಶ್ನೆ 1 ಈ ಕೆಳಗಿನ ಬಹು ಆಯ್ಕೆಯ ಪ್ರಶ್ನೆಗಳಿಗೆ ಸರಿ ಉತ್ತರ ಆಯ್ದು ಬರೆಯಿರಿ 1x3=3**

1] ಪ್ರೆಂಚರ ವಸಾಹತು

1] ಕೊಲ್ಕತ್ತಾ 2] ಗೋವಾ 3] ಮಾಹೆ 4] ಮದ್ರಾಸ

2] ಮಾನವಕುಲ ತಾನೊಂದೆ ವಲಂ ಎಂದು ಹೇಳಿದವರು

1] ರನ್ನ 2] ಪಂಪ 3] ಪೊನ್ನ 4] ಜನ್ನ

3] ಭಾರತದ ಭೂಗಡಿಯ ಉದ್ದ

1] 15200 ಕಿ.ಮೀ 2] 6100 ಕಿ.ಮೀ 3] 3200 ಕಿ.ಮೀ 4] 15400 ಕಿ.ಮೀ

**ಪ್ರಶ್ನೆ 2 ಈ ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ 1x2=2**

4] ಜಾನಪದ ಆಕರಗಳು ಯಾರಿಗೆ ವರಪ್ರಸಾದವಾಗಿವೆ ?

5] ಪೂರ್ವಾಗ್ರಹ ಎಂದರೇನು ?

**ಪ್ರಶ್ನೆ 3 ಎರಡು ಅಥವಾ ಮೂರು ವಾಕ್ಯದಲ್ಲಿ ಉತ್ತರಿಸಿರಿ 2x4=8**

6] ಚಾರ್ಲ್ಸ್‌ವುಡ್ ವರದಿಯ ಸಾರಾಂಶ ತಿಳಿಸಿ

7] 'ಕೋಮುವಾದ ಸಮಾಜದ ಶತ್ರು' ಹೇಗೆ ?

8] ರಚನಾತ್ಮಕ ಬದಲಾವಣೆ ಎಂದರೇನು ?

9] ಬ್ಯಾಂಕ ಎಂದರೇನು ?

**ಪ್ರಶ್ನೆ 4 ಏಳು ಎಂಟು ವಾಕ್ಯದಲ್ಲಿ ಉತ್ತರಿಸಿರಿ 3x1=3**

10] "ಸಮುದ್ರಯಾನಕ್ಕೆ ವೈಜ್ಞಾನಿಕ ಬೆಳವಣಿಗಯು ಕಾರಣ" ಈ ಹೇಳಿಕೆಯನ್ನು ಸಮರ್ಥಿಸಿ.

**ಪ್ರಶ್ನೆ 5 ಭಾರತ ನಕ್ಷೆ ತೆಗೆದು ಈ ಕೆಳಗಿನ ಸ್ಥಳಗಳನ್ನು ಗುರುತಿಸಿ 4x1=4**

1] ಕರ್ಕಾಟಕ ಸಂಕ್ರಾಂತಿ ವೃತ್ತ 2] ರೊಪ್ಲಿ 3] ಗಂಗಾನದಿ

ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿಯ ಸುತ್ತೋಲೆ ದಿನಾಂಕ: 26.07.2014 ರ ಸುತ್ತೋಲೆಯಂತೆ ಅಂಕ ನಿರ್ವಹಣೆ ಮಾಹಿತಿ:

## ಶಿಕ್ಷಕರ ಕ್ರೋಢೀಕರಣ ವಹಿ

**ಶಾಲೆಯ ಹೆಸರು**

ಶಿಕ್ಷಕರ ಕ್ರೋಢೀಕರಣ ವಹಿ – ಸಮಾಜ ವಿಜ್ಞಾನ ಅನುಕೂಲಕಾರರು :

| ಕ್ರ.ಸಂ | ವಿದ್ಯಾರ್ಥಿ ಹೆಸರು | FA-1 | | | | FA-2 | | | | ಒಟ್ಟು | FA- 1+2 | ಮಧ್ಯ ವಾರ್ಷಿಕ ಪರೀಕ್ಷೆ | | | FA-3 | | | | FA-4 | | | | ಒಟ್ಟು | FA- 3+ 4 | ಪೂ.ಸಿ ಪರೀಕ್ಷೆ | | | FA- 1+2+3 +4 | | ಸರಣಿ | |
|---|---|---|---|---|---|---|---|---|---|---|---|---|---|---|---|---|---|---|---|---|---|---|---|---|---|---|---|---|---|---|---|
| | | ಚ1 | ಚ2 | ಸಾ.ಪ | ಒಟ್ಟು | ಚ1 | ಚ2 | ಸಾ.ಪ | ಒಟ್ಟು | | | SA | SA+FA | ಶ್ರೇಣಿ | ಚ1 | ಚ2 | ಸಾ.ಪ | ಒಟ್ಟು | ಚ1 | ಚ2 | ಸಾ.ಪ | ಒಟ್ಟು | | | SA | SA+FA | ಶ್ರೇಣಿ | | | 1 | 2 |
| | | 15 | 15 | 20 | 50 | 15 | 15 | 20 | 50 | 100 | 20% | 80 | 100 | | 15 | 15 | 20 | 50 | 15 | 15 | 20 | 50 | 100 | 20% | 80 | 100 | | 200 | 20% | 80 | 80 |
| 1 | [illegible] | 12 | 12 | 15 | 39 | 13 | 14 | 18 | 45 | 84 | 17 | 70 | 87 | A | 12 | 15 | 19 | 46 | 13 | 12 | 19 | 44 | 90 | 18 | 66 | 84 | A | 174 | 17 | | |

| ಶ್ರೇಣಿ | | A+ | A | B+ | B | C+ | C |
|---|---|---|---|---|---|---|---|
| ಗರಿಷ್ಠ ಅಂಕಗಳು | ಶೇಕಡಾ% | 90-100 | 80-89 | 70-79 | 60-69 | 50-59 | 30-49 |
| 625 ಕ್ಕೆ | | 562-625 | 500-561 | 437-499 | 375-436 | 312-374 | 219-311 |
| 125 ಕ್ಕೆ | | 112-125 | 100-111 | 87-99 | 75-86 | 62-74 | 38-61 |
| 100 ಕ್ಕೆ | | 90-100 | 80-89 | 70-79 | 60-69 | 50-59 | 30-49 |

### ತೇರ್ಗಡೆಯ ನಿಯಮಗಳು

1. ಪ್ರಥಮ ಭಾಷೆಗೆ 100 ಅಂಕಗಳಿಗೆ ಕನಿಷ್ಠ 30 (30%) ಅಂಕಗಳನ್ನು ಪಡೆದಿರಬೇಕು.
2. ಬಾಹ್ಯ ಪರಿಕ್ಷೆಯಲ್ಲಿ 80 ಅಂಕಗಳಿಗೆ ಕನಿಷ್ಠ 24 (30%) ಅಂಕಗಳನ್ನು ಪಡೆದಿರಬೇಕು.
3. 500 ಅಂಕಗಳಿಗೆ ವಿದ್ಯಾರ್ಥಿ ಕನಿಷ್ಠ 175 (35%) ಅಂಕಗಳನ್ನು ಪಡೆದಿರಬೇಕು.
4. ರೂಪಣಾತ್ಮಕ ಮೌಲ್ಯಮಾಪನದಲ್ಲಿ ವಿದ್ಯಾರ್ಥಿ ಪಡೆಯಬೇಕಾದ ಕನಿಷ್ಠ ಅಂಕಗಳನ್ನು ನಿಗದಿ ಮಾಡಿರುವದಿಲ್ಲ

# ಶಿಕ್ಷಕರು ನಿರ್ವಹಿಸಬೇಕಾದ ದಾಖಲೆಗಳು

**1. ವಾರ್ಷಿಕ ಯೋಜನೆ:**

ಶೈಕ್ಷಣಿಕ ವರ್ಷದ ಆರಂಭದಲ್ಲಿ ಪ್ರತಿ ತಿಂಗಳಿಗೆ ದೊರೆಯುವ ಒಟ್ಟು ಅಧ್ಯಾಯಗಳನ್ನು ವಿಂಗಡನೆ ಮಾಡಿ ರೂ.ಮೌ. ಮತ್ತು ಸಂಕಲನಾತ್ಮಕ ಮೌಲ್ಯ ಮಾಪನಕ್ಕೆ ಚಟುವಟಿಕೆ,ಸಾಧನ ತಂತ್ರಗಳ ಸಹಿತ ವಿಂಗಡನೆ ಮಾಡುವದು.

**2. ಘಟಕ ಯೋಜನೆ ತಯಾರಿ:**

ಪ್ರತಿ ಘಟಕಕ್ಕೆ ರೂ. ಮೌ. ಮಾಡಲು ಯೋಜನೆಯನ್ನು ರೂಪಿಸುವದು. ಚಟುವಟಿಕೆ ಹಂತಗಳ ಜೊತೆಯಲ್ಲಿ ಪೂರಕ ಚಟುವಟಿಕಗಳನ್ನು ತಯಾರಿಸುವದು ಮತ್ತು ಪ್ರತಿ ಚಟುವಟಿಕೆಗೆ ಅವಧಿ ಹಂಚಿಕೆ ಮಾಡುವದು.

**3. ಚಟುವಟಿಕೆ ಸಿದ್ಧತೆ:**

ಚಟುವಟಿಕೆಯಲ್ಲಿ ಮಗುವಿನ ಭಾಗವಹಿಸುವಿಕೆ, ಅರ್ಥೈಸಿಕೊಳ್ಳುವಿಕೆಯನ್ನು ದಾಖಲಿಸಿಕೊಳ್ಳಲು ತಪಶೀಲು ಪಟ್ಟಿ, ದರ್ಜಾಮಾಪನ, ಅಭಿಪ್ರಾಯ ಸಂಗ್ರಹ ಪಟ್ಟಿ , ಪ್ರಶ್ನೆ ಪತ್ರಿಕೆ ಇತ್ಯಾದಿ ಸಾಧನಗಳ ತಯಾರಿ.

**4. ಶಿಕ್ಷಕರ ವಯಕ್ತಿಕ ದಾಖಲೆ ವಹಿ:**

ಪ್ರತಿ ಚಟುವಟಿಕೆಯಲ್ಲ್ಲಿ ಮಗು ಪಡೆದ ಒಟ್ಟು ಅಂಶಗಳ(ಅಂಕ) ದಾಖಲೆ ಮಾಡುವ ವಹಿ.

**5. ಶಿಕ್ಷಕರ ಡೈರಿ/ಸಾಂಧರ್ಬಿಕ ದಾಖಲೆ:**

ಪ್ರತಿ ಘಟಕವನ್ನು ತರಗತಿಯಲ್ಲಿ ರೂ.ಮೌ, ಅಂದರೆ ಚಟುವಟಿಕೆ ಮಾಡುವ ಸಂದರ್ಭದಲ್ಲಿ ಮಗುವಿನ ಕಲಿಕಾ ಕೊರತೆ ಮತ್ತು ತೊಡಗಿಸಿಕೊಳ್ಳದಿರುವದನ್ನು ಗಮನಿಸಿ ಧಾಖಲಿಸುವ ವಹಿ ಶಿಕ್ಷಕರ ಡೈರಿ ಮತ್ತು ತರಗತಿಯಲ್ಲಿ ಮತ್ತು ತರಗತಿ ಹೊರಗೆ ಮಗುವಿನ ವಿಷೇಶ ಗುಣಗಳು, ಕೌಶಲ್ಯಗಳು ಗಮನಿಸಿ ದಾಖಲಿಸುವದು ಸಾಂಧರ್ಬಿಕ ದಾಖಲೆ.

**6. ಕೃತಿ ಸಂಪುಟ:**

ಪ್ರತಿ ಘಟಕವನ್ನು ತರಗತಿಯಲ್ಲಿ ರೂ.ಮೌ ಅಂದರೆ ಚಟುವಟಿಕೆ ಮಾಡುವ ಸಂದರ್ಭದಲ್ಲಿ ಮಗುವಿನ ಎಲ್ಲಾ ತೊಡಗಿಸಿಕೊಂಡು ಬರೆದಿರುವ ಅಥವಾ ಅರ್ಥೈಸಿಕೊಂಡಿರುವ ಉತ್ತರ ಪತ್ರಿಕೆಗಳು, , ಅಭಿಪ್ರಾಯ ಸಂಗ್ರಹ ಪಟ್ಟಿ. ಲಿಖಿತ ನಿಬಂಧಗಳು. ಮತ್ತು ಮಗುವಿನ ವಯಕ್ತಿಕ ವಿರಗಳನ್ನು ಇದು ಒಳಗೊಂಡಿದೆ.

**7. ಕ್ರೋಢೀಕರಣ ವಹಿ:**

ಒಟ್ಟು ರೂ,ಮೌ ಮತ್ತು ಸಂ,ಮೌ ವನ್ನು ಎಲ್ಲಾ ವಿಷಯಗಳ ಜೊತೆ ಕೂಡಿಸುವ ವಹಿ ಇದು ಅಂಶ ಮತ್ತು ಶ್ರೇಣಿಗಳು ಎರಡನ್ನು ಒಳಗೊಂಡಿದೆ.

**8. ಅಂಕಪಟ್ಟಿ:**

ಮಕ್ಕಳ ವಯಕ್ತಿಕ ಅಂಕಪಟ್ಟಿಯಲ್ಲಿ ಪ್ರತಿ **ಮಗುವಿನ ಕ್ರೋಢೀಕೃತ ವಹಿಯಲ್ಲಿರುವ** ಒಟ್ಟು ರೂ,ಮೌ ಮತ್ತು ಸಂ,ಮೌ ವನ್ನು ಎಲ್ಲಾ ವಿಷಯಗಳ ಕೇವಲ ಒಟ್ಟು ಶ್ರೇಣಿಯನ್ನು **ಬರೆಯುವದು**

# *ಸಂಕಲನಾತ್ಮಕ ಮೌಲ್ಯಮಾಪನ 2 (ಬಾಹ್ಯ ಪರೀಕ್ಷೆ)*

| ಕ್ರ. ಸಂ | ಅಧ್ಯಾಯಗಳ ಹೆಸರು | ಬಹು ಆಯ್ಕೆ | 1 ಅಂಕ | 2 ಅಂಕ | | 3 ಅಂಕ | | 4 ಅಂಕ | | ನಕಾಶೆ 1+3 | ಒಟ್ಟು ಪ್ರಶ್ನೆಗಳು | | ಒಟ್ಟು ಅಂಕಗಳು |
|---|---|---|---|---|---|---|---|---|---|---|---|---|---|
| | ಪರ್ಯಾಯ ಪ್ರಶ್ನೆಗಳು | ಕಡ್ಡಾಯ | ಕಡ್ಡಾಯ | CHOICE | CHOICE | CHOICE | CHOICE | CHOICE | CHOICE | ಕಡ್ಡಾಯ | ಕಡ್ಡಾಯ ಪ್ರಶ್ನೆಗಳು | CHOICE 2 | |
| 1 | ಭಾರತಕ್ಕೆ ಯೂರೋಪಿಯನ್ನರ ಆಗಮನ | | | 1(2) | | | | | | | 1 | - | 02 |
| 2 | ವಸಾಹತು ಆಳ್ವಿಕೆಯಲ್ಲಿ ಕನ್ನಡ ಮಾತನಾಡುವ ಪ್ರದೇಶಗಳು | | | 1(2) | 1(2) | | | | | | 1 | 1 | 02 |
| 3 | ಮೌಖಿಕ ಚರಿತ್ರೆ | | 1(1) | | | | | | | | 1 | - | 01 |
| 4 | ಬ್ರಿಟಿಷ್ ಆಡಳಿತದ ಬುನಾದಿ ಹಾಗೂ ಅದರ ಪರಿಣಾಮಗಳು | | 1(1) | | | | | | | | 1 | - | 01 |
| 5 | ಸಾಮಾಜಿಕ ಮತ್ತು ಧಾರ್ಮಿಕ ಸುಧಾರಣೆಗಳು | | | 1(2) | 1(2) | | | | | | 1 | 1 | 02 |
| 6 | ಭಾರತದ ಪ್ರಥಮ ಸ್ವಾತಂತ್ರ್ಯ ಸಂಗ್ರಾಮ | | | | | 1(3) | | | | | 1 | 1 | 03 |
| 7 | ಭಾರತದಲ್ಲಿ ಬ್ರಿಟಿಷ್ ಆಡಳಿತದ ಪರಿಣಾಮಗಳು | | | | | | 1(3) | | | | | | |
| 8 | ಸ್ವಾತಂತ್ರ್ಯ ಹೋರಾಟ | | | | | | | 1(4) | 1(4) | | 1 | 1 | 04 |
| 9 | ಸ್ವಾತಂತ್ರ್ಯಭಾರತ | 2(2) | | | | | | | | | 2 | - | 02 |
| 10 | 20ನೇ ಶತಮಾನದ ರಾಜಕೀಯ ಆಯಾಮಗಳು | | 1(1) | 1(2) | | | | | | | 2 | - | 03 |
| | ಒಟ್ಟು ಪ್ರಶ್ನೆಗಳು/ಅಂಕಗಳು | 2(1) | 3(1) | 4(2) | 2(2) | 1(3) | 1(3) | 1(4) | 1(4) | - | 11 | 04 | 20 |
| 11 | ಭಾರತದ ಸಮಸ್ಯೆಗಳು ಹಾಗೂ ಅವುಗಳ ಪರಿಹಾರೋಪಾಯಗಳು | | 1(1) | 1(2) | | | | | | | 2 | | 03 |
| 12 | ಭಾರತದ ವಿದೇಶಾಂಗ ನೀತಿ | | | | | 1(3) | | | | | 1 | | 04 |
| 13 | ಅನ್ಯ ರಾಷ್ಟ್ರಗಳೊಂದಿಗೆ ಭಾರತದ ಸಂಬಂಧ | 1(1) | | | | | 1(3) | | | | 1 | 1 | |
| 14 | ಜಾಗತಿಕ ಸಮಸ್ಯೆಗಳು ಹಾಗೂ ಭಾರತದ ಪಾತ್ರ | | | 1(2) | | | | | | | 1 | | 2 |
| 15 | ಜಾಗತಿಕ ಸಂಸ್ಥೆಗಳು | | 2(1) | | | | | | | | 2 | | 2 |
| | ಒಟ್ಟು ಪ್ರಶ್ನೆಗಳು/ಅಂಕಗಳು | 3(1) | 3(1) | 2(2) | - | 1(3) | 1(3) | | | | 9 | 1 | 11 |
| 16 | ಸಾಮಾಜಿಕ ಸ್ತರ ವ್ಯವಸ್ಥೆ | 1(1) | | | | 1(3) | | | | | 2 | | 4 |
| 17 | ದುಡಿಮೆ ಮತ್ತು ಆರ್ಥಿಕ ಜೀವನ | | | | | | 1(3) | | | | | 1 | |
| 18 | ಸಾಮಾಜಿಕ ವರ್ತನೆ ಮತ್ತು ಪ್ರತಿಭಟನೆಗಳು | | | 1(2) | | | | | | | 1 | | 2 |
| 19 | ಸಾಮಾಜಿಕ ಸಮಸ್ಯೆಗಳು | | 2(1) | | | | | | | | 2 | | 2 |
| | ಒಟ್ಟು ಪ್ರಶ್ನೆಗಳು/ಅಂಕಗಳು | 1(1) | 2(1) | 1(2) | | 1(3) | 1(3) | | | | 5 | 1 | 8 |

# *ಸಂಕಲನಾತ್ಮಕ ಮೌಲ್ಯಮಾಪನ 2 (ಬಾಹ್ಯ ಪರೀಕ್ಷೆ)*

| ಕ್ರ. ಸಂ | ಅಧ್ಯಾಯಗಳ ಹೆಸರು | ಬಹು ಆಯ್ಕೆ | 1 ಅಂಕ | 2 ಅಂಕ | | 3 ಅಂಕ | | 4 ಅಂಕ | | ನಕ್ಷೆ 1+3 | ಒಟ್ಟು ಪ್ರಶ್ನೆಗಳು | | ಒಟ್ಟು ಅಂಕಗಳು |
|---|---|---|---|---|---|---|---|---|---|---|---|---|---|
| | ಪರ್ಯಾಯ ಪ್ರಶ್ನೆಗಳು | ಪ್ರಶ್ನೆ | ಪ್ರಶ್ನೆ | CHOICE | CHOICE | CHOICE | CHOICE | CHOICE | CHOICE | ಪ್ರಶ್ನೆ | ಕಡ್ಡಾಯ ಪ್ರಶ್ನೆಗಳು | CHOICE 2 | |
| 20 | ಭಾರತ ನಮ್ಮ ಮಾತೃ ಭೂಮಿ. | | | | | | | | | 1* | 1* | | 1 |
| 21 | ಭಾರತದ ಪ್ರಾಕೃತಿಕ ಲಕ್ಷಣಗಳು | | | 1(2) | | | | | | | 1 | | 2 |
| 22 | ಮಾನ್ಸೂನ್ ವಾಯುಗುಣ, ಋತುಮಾನಗಳು ಮತ್ತು ಲಕ್ಷಣಗಳು | | 1(1) | | | | | | | 1* | 1 | | 2 |
| 23 | ಭಾರತದ ಮಣ್ಣುಗಳು | | | 1(2) | | | | | | | 1 | | 2 |
| 24 | ಭಾರತದ ಅರಣ್ಯಗಳು | | | 1(2) | | | | | | | 1 | | 2 |
| 25 | ಜಲ ಸಂಪನ್ಮೂಲಗಳು | 1(1) | | | | | | | | 1* | 1 | | 2 |
| 26 | ಭೂ ಬಳಕೆ ಹಾಗೂ ವ್ಯವಸಾಯ | | 2(1) | | | | | | | | 2 | | 2 |
| 27 | ಖನಿಜ ಮತ್ತು ಶಕ್ತಿ ಸಂಪನ್ಮೂಲ | | 1(1) | | | | | | | 1* | 1 | | 2 |
| 28 | ಭಾರತದ ಸಾರಿಗೆ | | | | | 1(3) | | | | | 1 | | 4 |
| 29 | ಭಾರತದ ಪ್ರಮುಖ ಕೈಗಾರಿಕೋದ್ದಿಮೆಗಳು | | 1(1) | | | | 1(3) | | | | 1 | 1 | |
| 30 | ಸಂಪರ್ಕ | | | 1(2) | | | | | | | 1 | | 2 |
| 31 | ನೈಸರ್ಗಿಕ ವಿನಾಶಕಾರಕಗಳು | | | 1(2) | | | | | | | 1 | | 2 |
| 32 | ಜನಸಂಖ್ಯೆ | | | 1(2) | | | | | | | 1 | | 2 |
| | **ಒಟ್ಟು ಪ್ರಶ್ನೆಗಳು/ಅಂಕಗಳು** | 1(1) | 5(1) | 6(2) | | 1(3) | 1(3) | | | 1*(4) | 14 | 1 | 25 |
| 33 | ಅಭಿವೃದ್ಧಿ | | 2(1) | | | | | | | | 2 | | 2 |
| 34 | ಅರ್ಥ ವ್ಯವಸ್ಥೆ ಮತ್ತು ಸರ್ಕಾರ | | | 1(2) | | | | | | | 1 | | 2 |
| 35 | ಗ್ರಾಮೀಣಾಭಿವೃದ್ಧಿ | | | | | 1(3) | | | | | 1 | | 4 |
| 36 | ಸಾರ್ವಜನಿಕ ಹಣಕಾಸು ಮತ್ತು ಆಯವ್ಯಯ | 1(1) | | | | | 1(3) | | | | 1 | 1 | |
| | **ಒಟ್ಟು ಪ್ರಶ್ನೆಗಳು/ಅಂಕಗಳು** | 1(1) | 2(1) | 1(2) | | 1(3) | 1(3) | | | | 5 | 1 | 8 |
| 37 | ಬ್ಯಾಂಕು ವ್ಯವಹಾರಗಳು | 1(1) | | | | | 1(3) | | | | 1 | 1 | 4 |
| 38 | ವಿಮೆ | | | | | 1(3) | | | | | 1 | | |
| 39 | ಉದ್ಯಮಗಾರಿಕೆ | 1(1) | 1(1) | | | | | | | | 2 | | 2 |
| 40 | ವ್ಯವಹಾರದ ಜಾಗತೀಕರಣ | | | 1(2) | | | | | | | 1 | | 2 |
| | **ಒಟ್ಟು ಪ್ರಶ್ನೆಗಳು/ಅಂಕಗಳು** | 2(1) | 1(1) | 1(2) | | 1(3) | 1(3) | | | | 5 | 1 | 8 |

## ಪ್ರಶ್ನಾನುಸಾರ ಅಂಕಗಳ ಹಂಚಿಕೆ

| ವಿಷಯ | ಬಹು ಆಯ್ಕೆ | ಅತಿ ಕಿರು ಉತ್ತರ | ಕಿರು ಉತ್ತರ | ದೀರ್ಘ ಉತ್ತರ | ಅತಿ ದೀರ್ಘ ಉತ್ತರ | ಪ್ರಶ್ನೆಗಳು | ಅಂಕಗಳು |
|---|---|---|---|---|---|---|---|
| ಇತಿಹಾಸ | 2 | 3 | 4 | 1 | 1 | 11 | 20 |
| ರಾಜ್ಯಶಾಸ್ತ್ರ | 2 | 2 | 2 | 1 | -- | 7 | 11 |
| ಸಮಾಜಶಾಸ್ತ್ರ | 1 | 2 | 1 | 1 | -- | 5 | 8 |
| ಭೂಗೋಳ | 2 | 4 | 6 | 1 | 1 | 14 | 25 |
| ಅರ್ಥಶಾಸ್ತ್ರ | 1 | 2 | 1 | 1 | -- | 5 | 8 |
| ವ್ಯ.ಅಧ್ಯಯನ | 2 | 1 | 1 | 1 | -- | 5 | 8 |
| ಒಟ್ಟು | 10 | 14 | 15 | 06 | 02 | 47 | 80 |

| | | | | |
|---|---|---|---|---|
| 1. | ಬಹು ಆಯ್ಕೆ | 1x10 | 10 | 10 ಅಂಕಗಳು |
| 2. | ಅತಿ ಕಿರು ಉತ್ತರ | 1x14 | 14 | 14 ಅಂಕಗಳು |
| 3. | ಕಿರು ಉತ್ತರ | 2x15 | 15 | 30 ಅಂಕಗಳು |
| 4. | ದೀರ್ಘ ಉತ್ತರ | 3x6 | 6 | 18 ಅಂಕಗಳು |
| 5. | ಅತಿ ದೀರ್ಘ ಉತ್ತರ | 4x1 | 1 | 4 ಅಂಕಗಳು |
| 6 | ನಕ್ಷೆ | 4 | 1 | 4 ಅಂಕಗಳು |
| | ಒಟ್ಟು | | 47 | 80 |

### ಉದ್ದಿಷ್ಟಗಳಿಗೆ ಅಂಕಗಳ ಹಂಚಿಕೆ

| ಕ್ರ.ಸಂ | ಉದ್ದೀಷ್ಟಗಳು | ಶೇಕಡಾ |
|---|---|---|
| 1 | ಜ್ಞಾನ | 16% |
| 2. | ತಿಳುವಳಿಕೆ | 50% |
| 3. | ಅನ್ವಯ | 29% |
| 4. | ಕೌಶಲ್ಯ | 5% |

### ಕಠಿಣತೆಯ ಮಟ್ಟ

| ಕ್ರ.ಸಂ | ಕಠಿಣತೆಯ ಮಟ್ಟ | ಶೇಕಡಾ |
|---|---|---|
| 1 | ಸುಲಭ | 30% |
| 2. | ಸಾಮಾನ್ಯ | 50% |
| 3. | ಕ್ಲಿಷ್ಟ | 20% |

| ಕ್ರ.ಸಂ | ವಿಭಾಗಗಳು | ನೀಲ ನಕಾಶೆ | | | | | | | | | | | | | | | | | | | | ಒಟ್ಟು ಪ್ರಶ್ನೆಗಳು | ಒಟ್ಟು ಅಂಕಗಳು |
|---|---|---|---|---|---|---|---|---|---|---|---|---|---|---|---|---|---|---|---|---|---|---|---|
| | | **Remembering** ಜ್ಞಾನ | | | | | **Understanding** ತಿಳುವಳಿಕೆ | | | | | **Application** ಅನ್ವಯ | | | | | **Skill** ಕೌಶಲ್ಯ | | | | | | |
| | | ಬಹು ಆಯ್ಕೆ | 1 ಅಂಕ | 2 ಅಂಕ | 3 ಅಂಕ | 4 ಅಂಕ | ಬಹು ಆಯ್ಕೆ | 1 ಅಂಕ | 2 ಅಂಕ | 3 ಅಂಕ | 4 ಅಂಕ | ಬಹು ಆಯ್ಕೆ | 1 ಅಂಕ | 2 ಅಂಕ | 3 ಅಂಕ | 4 ಅಂಕ | ಬಹು ಆಯ್ಕೆ | 1 ಅಂಕ | 2 ಅಂಕ | 3 ಅಂಕ | 4 ಅಂಕ | | |
| | **ಸಮಾಜ ವಿಜ್ಞಾನ** | | | | | | | | | | | | | | | | | | | | | | |
| **1** | ಭಾರತಕ್ಕೆ ಯೂರೋಪಿಯನ್ನರ ಆಗಮನ | | | | | | | | | | | | | 1(2) | | | | | | | | **1** | **2** |
| **2** | ವಸಾಹತು ಆಳ್ವಿಕೆಯಲ್ಲಿ ಕನ್ನಡ ಮಾತನಾಡುವ ಪ್ರದೇಶಗಳು | | | | | | | | 1(2)* | | | | | | | | | | | | | **1** | **2** |
| **3** | ಮೌಖಿಕ ಚರಿತ್ರೆ | | | | | | | | | | | | 1(1) | | | | | | | | | **1** | **1** |
| **4** | ಬ್ರಿಟಿಷ್ ಆಡಳಿತದ ಬುನಾದಿ ಹಾಗೂ ಅದರ ಪರಿಣಾಮಗಳು | | | | | | | | | | | | | 1(1) | | | | | | | | **1** | **1** |
| **5** | ಸಾಮಾಜಿಕ ಮತ್ತು ಧಾರ್ಮಿಕ ಸುಧಾರಣೆಗಳು | | | | | | | | 1(2)* | | | | | | | | | | | | | **1** | **2** |
| **6** | ಭಾರತದ ಪ್ರಥಮ ಸ್ವಾತಂತ್ರ್ಯ ಸಂಗ್ರಾಮ | | | | | | | | | | | | | | 1(3)} | | | | | | | **1** | **} 2** |
| **7** | ಭಾರತದಲ್ಲಿ ಬ್ರಿಟಿಷ್ ಆಡಳಿತದ ಪರಿಣಾಮಗಳು | | | | | | | | | | | | | | 1(3)} | | | | | | | **1** | **} 1** |
| **8** | ಸ್ವಾತಂತ್ರ್ಯ ಹೋರಾಟ | | | | | | | | | | 1(4)} | | | | | | | | | | | **2** | **4** |
| **9** | ಸ್ವಾತಂತ್ರ್ಯ ಭಾರತ | 2(2) | | | | | | | | | | | | | | | | | | | | **2** | **2** |
| **10** | 20ನೇ ಶತಮಾನದ ರಾಜಕೀಯ ಆಯಾಮಗಳು | | | | | | | | 1(2)* | | | | 1(1) | | | | | | | | | **2** | **3** |

| | | Remembering | | | | | Understanding | | | | | Application | | | | | Skill | | | | | | |
|---|---|---|---|---|---|---|---|---|---|---|---|---|---|---|---|---|---|---|---|---|---|---|---|
| | | 1 | 2 | 3 | 4 | 5 | 1 | 2 | 3 | 4 | 5 | 1 | 2 | 3 | 4 | 5 | 1 | 2 | 3 | 4 | 5 | | |
| | **ರಾಜ್ಯಶಾಸ್ತ್ರ** | | | | | | | | | | | | | | | | | | | | | | |
| **1** | ಭಾರತದ ಸಮಸ್ಯೆಗಳು ಹಾಗೂ ಅವುಗಳ ಪರಿಹಾರೋಪಾಯಗಳು | | | 1(2) | | | | | | | | | 1(1) | | | | | | | | | **2** | **3** |
| **2** | ಭಾರತದ ವಿದೇಶಾಂಗ ನೀತಿ | | | | | | | | | 1(3) | | | | | | | | | | | | **1** | **} 2** |
| **3** | ಅನ್ಯ ರಾಷ್ಟ್ರಗಳೊಂದಿಗೆ ಭಾರತದ ಸಂಬಂಧ | | | | | | | | | 1(3) | | 1(1) | | | | | | | | | | **2** | **} 2** |
| **4** | ಜಾಗತಿಕ ಸಮಸ್ಯೆಗಳು ಹಾಗೂ ಭಾರತದ ಪಾತ್ರ | | | | | | | | 1(2) | | | | | | | | | | | | | **1** | **2** |
| **5** | ಜಾಗತಿಕ ಸಂಸ್ಥೆಗಳು | | | | | | | 1(1) | | | | | 1(1) | | | | | | | | | **2** | **2** |
| | **ಸಮಾಜಶಾಸ್ತ್ರ** | | | | | | | | | | | | | | | | | | | | | | |
| **1** | ಸಾಮಾಜಿಕ ಸ್ತರ ವ್ಯವಸ್ಥೆ | | | | | | 1(1) | | | 1(3) | | | | | | | | | | | | **2** | **} 2** |
| **2** | ದುಡಿಮೆ ಮತ್ತು ಆರ್ಥಿಕ ಜೀವನ | | | | | | | | | 1(3) | | | | | | | | | | | | **1** | **} 2** |
| **3** | ಸಾಮಾಜಿಕ ವರ್ತನೆ ಮತ್ತು ಪ್ರತಿಭಟನೆಗಳು | | | 1(2) | | | | | | | | | | | | | | | | | | **1** | **2** |
| **4** | ಸಾಮಾಜಿಕ ಸಮಸ್ಯೆಗಳು | | | | | | | | | | | | 2(2) | | | | | | | | | **2** | **2** |

ಎರಡು ಅಂಕಗಳ ಒಂದೇ ಒಂದು ಆಂತರಿಕ ಪರ್ಯಾಯ ಪ್ರಶ್ನೆ        * ನಕ್ಷಾ ಕೌಶಲ್ಯದ ಪ್ರಶ್ನೆ

| | | ನೀಲ ನಕಾಶೆ | | | | | | | | | | | | | | | | | | | | ಒಟ್ಟು ಪ್ರಶ್ನೆಗಳು | ಒಟ್ಟು ಅಂಕಗಳು |
|---|---|---|---|---|---|---|---|---|---|---|---|---|---|---|---|---|---|---|---|---|---|---|---|
| | | Remembering | | | | | Understanding | | | | | Application | | | | | Skill | | | | | | |
| | | 1 | 2 | 3 | 4 | | | 2 | 3 | 4 | 5 | 1 | 2 | 3 | 4 | 5 | 1 | 2 | 3 | 4 | 5 | | |
| | **ಭೂಗೋಳ ಶಾಸ್ತ್ರ** | | | | | | | | | | | | | | | | | | | | | | |
| **1.** | ಭಾರತ ನಮ್ಮ ಮಾತೃಭೂಮಿ | | | | | | | | | | | | | | | | 1* | | | | | **1*** | **1** |
| **2.** | ಭಾರತದ ಪ್ರಾಕೃತಿಕ ಲಕ್ಷಣಗಳು | | | | | | | | 1(2) | | | | | | | | | | | | | **1** | **2** |
| **3.** | ಮಾನ್ಸೂನ್ ವಾಯುಗುಣ, ಋತುಮಾನಗಳು ಮತ್ತು ಲಕ್ಷಣಗಳು | | | | | | 1(1) | | | | | | | | | | 1* | | | | | **1** | **2** |
| **4.** | ಭಾರತದ ಮಣ್ಣುಗಳು | | | | | | | | 1(2) | | | | | | | | | | | | | **1** | **2** |
| **5.** | ಭಾರತದ ಅರಣ್ಯಗಳು | | | | | | | | 1(2) | | | | | | | | | | | | | **1** | **2** |
| **6.** | ಜಲ ಸಂಪನ್ಮೂಲಗಳು | 1(1) | | | | | | | | | | | | | | | 1* | | | | | **1** | **2** |
| **7.** | ಭೂ ಬಳಕೆ ಹಾಗೂ ವ್ಯವಸಾಯ | | 2(2) | | | | | | | | | | | | | | | | | | | **2** | **2** |
| **8.** | ಖನಿಜ ಮತ್ತು ಶಕ್ತಿ ಸಂಪನ್ಮೂಲ | | | | | | | | | | | | 1(1) | | | | 1* | | | | | **1** | **1** |
| **9.** | ಭಾರತದ ಸಾರಿಗೆ | | | | | | | | | 1(3) | | | | | | | | | | | | **1** | } **2** |
| **10.** | ಭಾರತದ ಪ್ರಮುಖ ಕೈಗಾರಿಕೋದ್ದಿಮೆಗಳು | | | | | | | | | 1(3) | | | 1(1) | | | | | | | | | **2** | } **2** |
| **11.** | ಸಂಪರ್ಕ | | | | | | | | | | | | | 1(2) | | | | | | | | **1** | **2** |
| **12.** | ನೈಸರ್ಗಿಕ ವಿನಾಶಕಾರಕಗಳು | | | | | | | | 1(2) | | | | | | | | | | | | | **1** | **2** |
| **13.** | ಜನಸಂಖ್ಯೆ | | | | | | | | | | | | | 1(2) | | | | | | | | **1** | **2** |
| | | | | | | | | | | | | | | | | | | | | | | | |
| | | Remembering | | | | | Understanding | | | | | Application | | | | | Skill | | | | | | |
| | **ಅರ್ಥಶಾಸ್ತ್ರ** | **1** | **2** | **3** | **4** | **5** | **1** | **2** | **3** | **4** | **5** | **1** | **2** | **3** | **4** | **5** | **1** | **2** | **3** | **4** | **5** | | |

| | | | | | | | | | | | | | | | | | | | | | | | |
|---|---|---|---|---|---|---|---|---|---|---|---|---|---|---|---|---|---|---|---|---|---|---|---|
| **1.** | ಅಭಿವೃದ್ಧಿ | | | | | | | | | | | | 2(2) | | | | | | | | | **2** | **2** |
| **2.** | ಅರ್ಥ ವ್ಯವಸ್ಥೆ ಮತ್ತು ಸರ್ಕಾರ | | | 1(2) | | | | | | | | | | | | | | | | | | **2** | **2** |
| **3.** | ಗ್ರಾಮೀಣಾಭಿವೃದ್ಧಿ | | | | | | | | | 1(3) | | | | | | | | | | | | **1** | **2** |
| **4.** | ಸಾರ್ವಜನಿಕ ಹಣಕಾಸು ಮತ್ತು ಆಯವ್ಯಯ | | | | | | 1(1) | | | 1(3) | | | | | | | | | | | | **2** | **2** |
| | **ವ್ಯವಹಾರ ಅಧ್ಯಯನ** | | | | | | | | | | | | | | | | | | | | | | |
| **1.** | ಬ್ಯಾಂಕು ವ್ಯವಹಾರಗಳು | | | | | | 1(1) | | | 1(3) | | | | | | | | | | | | **1** | **2** |
| **2.** | ವಿಮೆ | | | | | | | | | 1(3) | | | | | | | | | | | | **1** | **2** |
| **3.** | ಉದ್ಯಮಗಾರಿಕೆ | 1(1) | 1(1) | | | | | | | | | | | | | | | | | | | **2** | **2** |
| **4.** | ವ್ಯವಹಾರದ ಜಾಗತೀಕರಣ | | | | | | | | | | | | 2(2) | | | | | | | | | **1** | **2** |

## ಮಾದರಿ ಪ್ರಶ್ನೆ ಪತ್ರಿಕೆ – 2014–15

**I. ಈ ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಪರ್ಯಾಯ ಉತ್ತರಗಳನ್ನು ಕೊಡಲಾಗಿದೆ. ಅವುಗಳಲ್ಲಿ ಹೆಚ್ಚು ಸೂಕ್ತವಾದ ಉತ್ತರವನ್ನು ಆರಿಸಿ, ಉತ್ತರ ಬರೆಯಲು ಕೊಟ್ಟಿರುವ ಜಾಗದಲ್ಲಿಯೇ ಕ್ರಮಾಕ್ಷರಗಳೊಂದಿಗೆ ಪೂರ್ಣ ಉತ್ತರವನ್ನು ಬರೆಯಿರಿ. 10*1=10**

1. ವಿಶ್ವಕುಟುಂಬದ ಆರ್ಥಿಕ ಪ್ರಗತಿಗೆ ಪೂರಕವಾಗಿ ಕಾರ್ಯನಿರ್ವಹಿಸುತ್ತಿರುವ ಸಂಸ್ಥೆ
   A) ವಿಶ್ವ ವ್ಯಾಪಾರ ಸಂಘ
   B) ವಿಶ್ವಸಂಸ್ಥೆಯ ವ್ಯಾಪಾರ ಮತ್ತು ವಾಣಿಜ್ಯ ಪ್ರಗತಿ ಸಮಿತಿ
   C) ಐ.ಎಮ್.ಎಫ್  D) ಯೂನಿಸೆಫ್

2. ಭಾರತವು ಅಲಿಪ್ತ ಚಳುವಳಿಯನ್ನು ಅನುಸರಿಸಿದ್ದು
   A) ಸ್ವಾತಂತ್ರ್ಯ ಚಳುವಳಿ ಸಮಯದಲ್ಲಿ
   B) ಎರಡನೇ ವಿಶ್ವ ಸಮರದ ಸಮಯದಲ್ಲಿ
   C) ಎರಡು ಧ್ರುವೀಕರಣ ಜಗತ್ತು ಸಮಯದಲ್ಲಿ
   D) ಭಾರತ ಚೀನಾಯುದ್ಧ ಸಮಯದಲ್ಲಿ

3. ಇಂದು ಸಮಾಜದಲ್ಲಿ ವರ್ಗ ವ್ಯವಸ್ಥೆ ಉಂಟಾಗಲು ಕಾರಣ
   A) ವಸಾಹತಿ ಕರಣ  B) ಕೈಗಾರಿಕೀಕರಣ
   C) ಶಿಕ್ಷಣ  D) ಜನಸಂಖ್ಯೆ

4. A ಪಟ್ಟಿಯಲ್ಲಿ ನಾಯಕರು ಮತ್ತು B ಪಟ್ಟಿಯಲ್ಲಿ ಅವರ ಕಾರ್ಯಗಳನ್ನು ಸೂಚಿಸಲಾಗಿದೆ. ಇವುಗಳ ಸರಿಹೊಂದುವ ಉತ್ತರದ ಗುಂಪು

| A | B |
|---|---|
| 1) ಮಹಮದ್ ಆಲಿ ಜಿನ್ನ | a) ಬಹಿಷ್ಕೃತ ಹಿತಕಾರಿಣಿಸಭೆ |
| 2) ಡಾ॥ ಬಿ.ಆರ್. ಅಂಬೇಡ್ಕರ್ | b) ದಂಡಿ ಸತ್ಯಾಗ್ರಹ |
| 3) ಗಾಂಧೀಜಿ | c) ಸ್ವರಾಜ ಪಕ್ಷ |
| 4) ಮೋತಿಲಾಲ್ ನೆಹರು | d) ನೇರ ಕಾರ್ಯಾಚರಣೆ ದಿನ |

   A) 1 – d  2 – a  3 – b  4 – c
   B) 1 – a  2 – b  3 – c  4 – d
   C) 1 – b  2 – c  3 – d  4 – a
   D) 1 – c  2 – d  3 – a  4 – b

5. ಗೋವೆಯನ್ನು ಪೋರ್ಚುಗೀಸರಿಂದ ವಿಮೋಚನೆಗೊಳಿಸಿದ ವರ್ಷ
   A) 1947  B) 1955  C) 1961  D) 1987

6. ಅಕ್ಟೋಬರ್ ತಿಂಗಳಿನಲ್ಲಿ ಉಷ್ಣಾಂಶವು ಉತ್ತರಾರ್ಧಗೋಳದಲ್ಲಿ ಕಡಿಮೆಯಾಗಲು ಕಾರಣ
   A) ಸೂರ್ಯನ ಕಿರಣಗಳು ದಕ್ಷಿಣಾರ್ಧ ಗೋಳದ ಮೇಲೆ ಲಂಬವಾಗಿ ಬೀಳುತ್ತದೆ.
   B) ಸೂರ್ಯನ ಕಿರಣಗಳು ಓರೆಯಾಗಿ ದಕ್ಷಿಣಾರ್ಧ ಗೋಳದ ಮೇಲೆ ಬೀಳುತ್ತವೆ.
   C) ಸೂರ್ಯನ ಕಿರಣಗಳು ನೇರವಾಗಿ ಸಮಭಾಜಕ ವೃತ್ತದ ಮೇಲೆ ಬೀಳುತ್ತವೆ.
   D) ಸೂರ್ಯನ ಕಿರಣಗಳು ಲಂಬವಾಗಿ ಉತ್ತರಾರ್ಧ ಗೋಳದ ಮೇಲೆ ಬೀಳುತ್ತವೆ.

7. ನಕ್ಷೆಯಲ್ಲಿ ಗುರುತಿಸಿರುವ ಪ್ರದೇಶಗಳನ್ನು ಸರಿಯಾಗಿ ಹೋಲಿಕೆಯಾಗುವುದು.
   A) 1) ದೆಹಲಿ
      2) ಮದ್ರಾಸ್
      3) ಕಲ್ಕತ್ತ
   B) 1) ಮುಂಬಯಿ
      2) ದೆಹಲಿ
      3) ಕ್ಯಾಲಿಕಟ್
   C) 1) ಕಲ್ಕತ್ತ
      2) ಮದ್ರಾಸ್
      3) ಮುಂಬಯಿ
   D) 1) ಕಲ್ಕತ್ತ  2) ದೆಹಲಿ  3) ಮುಂಬಯಿ




8. ಸರ್ಕಾರದ ಒಂದು ವರ್ಷದ ಆದಾಯ ಮತ್ತು ವೆಚ್ಚಗಳನ್ನು ಕುರಿತು ತಯಾರಿಸಿದ ಅಂದಾಜು ಪಟ್ಟಿ
   A) ಸಾರ್ವಜನಿಕ ಹಣಕಾಸು  B) ಸಾರ್ವಜನಿಕ ವೆಚ್ಚಗಳು
   C) ಯೋಜನಾ ವೆಚ್ಚಗಳು  D ಆಯವ್ಯಯ

9) ಬ್ಯಾಂಕುಗಳ ಬ್ಯಾಂಕು
   A) ಮೈಸೂರು ಬ್ಯಾಂಕು  B) ಭೂ ಬ್ಯಾಂಕು
   C) ಸಹಕಾರಿ ಬ್ಯಾಂಕು  D) ರಿಸರ್ವ್ ಬ್ಯಾಂಕ್

10) ಬಿಳಿಕ್ರಾಂತಿಯ ಪಿತಾಮಹ ಎಂದು ಪ್ರಖ್ಯಾತರಾಗಿರುವವರು.
   A) ಧೀರೂಬಾಯಿ ಅಂಬಾನಿ  B) ವರ್ಗೀಸ್ ಕುರಿಯನ್
   C) ಅಜೀಂ ಪ್ರೇಮ್‌ಜಿ  D) ಕಿರಣ್ ಮಂಜುಂದಾರ್ ಶಾ

**II. ಈ ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ. 14*1=14**

11. ಭಾರತ ಹೆಚ್ಚು ಲಿಖಿತ ಇತಿಹಾಸ ಆಕರಗಳನ್ನು ಹೊಂದಿರಲಿಲ್ಲ. ಏಕೆ?
12. ಬ್ರಿಟೀಷರು ಭಾರತದಲ್ಲಿ ಹೂಡಿದ ಕೈಗಾರಿಕಾ ಬಂಡವಾಳದ ಪರಿಣಾಮವೇನು?
13. ಹೋಲೋಕಾಸ್ಟ್ ಎಂದರೇನು?
14. ಕರ್ನಾಟಕದ ಸ್ಥಳೀಯ ಸಂಸ್ಥೆಗಳಲ್ಲಿ ಸ್ತ್ರೀಯರಿಗೆ ಶೇ. 33 ಮೀಸಲಾತಿ ನೀಡುವ ಮೂಲ ಕಾರಣವೇನು?
15. ಸಾರ್ಕ್ ಸಂಸ್ಥೆಯ ಪ್ರಗತಿಗೆ ತೊಡಕಾಗಿರುವ ಅದರ ಸೂತ್ರವೇನು?

16. ಗರ್ಭದಲ್ಲಿರುವ ಮಗುವಿನ ಲಿಂಗ ಕಂಡುಕೊಳ್ಳುವಿಕೆ ಕಾನೂನು ಬಾಹಿರ ಏಕೆ?
17. ಬಾಲ ಕಾರ್ಮಿಕ ವಿರೋಧಿ ಕಾಯ್ದೆ ಉಲ್ಲಂಘಿಸಿದ ಉದ್ಯೋಗಪತಿಗಳು ಕಡ್ಡಾಯವಾಗಿ ಭರಿಸಬೇಕಾದ್ದು ಏನು?
18. ಭಾರತವನ್ನು ಪ್ರವೇಶಿಸುವ ನೈರುತ್ಯ ಮಾನ್‌ಸೂನ್ ಮಾರುತಗಳ ಎರಡು ಕವಲುಗಳು ಯಾವುವು?
19. ಜೇಡ್ ಬೇಸಾಯ ಎಂದರೇನು?
20. ಗ್ಲೋಬಲ್ ವಾರ್ಮಿಂಗ್ ಎಂದರೇನು?
21. ತಲಾ ಆದಾಯವನ್ನು ಹೇಗೆ ಕಂಡುಹಿಡಿಯಲಾಗುತ್ತದೆ?
22. ಸುವರ್ಣ ಕ್ರಾಂತಿ ಎಂದರೇನು?
23. ಮಹಿಳಾ ಸಬಲೀಕರಣ ಎಂದರೇನು?
